ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ 370(2)ನೇ ನಿಯಮದ ಅನುಸಾರವಾಗಿ ಈ ಸಭೆ ಸದನ ಸಮಿತಿ (ವಸತಿ ಸೌಕರ್ಯಗಳ ಸಮಿತಿ)ಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸುವುದು.

ಐ) 1960ನೇ ಇಸವಿಯ ಅನಾಥಾಲಯ ಮತ್ತು ಧರ್ಮಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಕಾಯ್ದೆ ಭಾಗ 2ರ ನಿಯಂತ್ರಣ ಮಂಡಳಿಯ ಅಧಿಕಾರಿ ಮತ್ತು ಕರ್ತವ್ಯದ ಸಂಖ್ಯೆ 5(2)ರ (ಎ), (ಬಿ)ಯ ಪ್ರಕಾರ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಅನಾಥಾಲಯವನ್ನು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು. ತಾವು ಮಾತನಾಡಿ.

7. ನಿಲುವಳಿ ಸೂಚನೆ

ವಿಷಯ:– ಕೂಲಿಗಾಗಿ ಕಾಳು–ಯೋಜನೆಯಡಿಯಲ್ಲಿ ನಡೆದಂಥ ಅವ್ಯವಹಾರದ ಕುರಿತು:–

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಕೋಟ್ಯಾಂತರ ಜನಕ್ಕೆ ಸಂಬಂಧಪಟ್ಟಂತೆ ಕೂಲಿಗಾಗಿ ಕಾಳು ಯೋಜನೆಗೆ ಬಂದಂತಹ ಲಕ್ಷಾಂತರ ಟನ್ ಅಕ್ಕಿ ಒಂದು ರೀತಿಯಲ್ಲಿ ಲೂಟಿ ಮಾಡಿ, ಹಗಲು ದರೋಡೆ ಮಾಡಿ ಹೊರದೇಶಕ್ಕೆ ಕಳುಹಿಸಿ, ಮತ್ತೊಮ್ಮೆ ಇನ್ನೊಂದು ಕನ್‌ಸೈನ್‌ಮೆಂಟ್ ಹೊರದೇಶಕ್ಕೆ ಕಳುಹಿಸುವಂತಹ ಸಂದರ್ಭದಲ್ಲಿ ಸಿಕ್ಕಿಬಿದ್ದು, ಅದರ ಬಗ್ಗೆ ಇವತ್ತು ರಾಜ್ಯದ ಉದ್ದಗಲಕ್ಕೂ ರಾಜ್ಯದ ಜನತೆ ಮಾತನಾಡುವಂತಹ ಪರಿಸ್ಥಿತಿ ಬಂದಿದೆ. ಈ ಹಿಂದೆ ನಮ್ಮ ಜೆಡಿ (ಎಸ್) ಸ್ನೇಹಿತರು ಇಲ್ಲಿ ಇದ್ದಂತಹ ಸಂದರ್ಭದಲ್ಲಿ, ಪ್ರತಿಪಕ್ಷದ ಎಲ್ಲಾ ಸದಸ್ಯರು ಒಟ್ಟಾಗಿ ನಾವು ನಿಲುವಳಿ ಸೂಚನೆ ಮೂಲಕ ಈ ವಿಷಯವನ್ನು ಈ ಮನೆಯಲ್ಲಿ ಹಾಗೂ ಆ ಮನೆಯಲ್ಲಿ ಪ್ರಸ್ತಾಪ ಮಾಡಿದ್ದೆವು. ಈ ಬಾರಿ ಸಹ ನಮ್ಮ ಪ್ರತಿಪಕ್ಷದ ಸ್ನೇಹಿತರಾದಂತಹ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ಶ್ರೀರಾಮರೆಡ್ಡಿಯವರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಈ ಭಾಗದ ಮುಖಂಡರೆಲ್ಲ ಸೇರಿ ಒಂದು ನಿಲುವಳಿ ಸೂಚನೆಯನ್ನು ನಿಮಗೆ ಕಳುಹಿಸಿಕೊಟ್ಟಿದ್ದೇವೆ. ಬರಗಾಲ ಪೀಡಿತ ಪ್ರದೇಶದಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಬಡ ಕೂಲಿ ಕಾರ್ಮಿಕರಿಗೆ ಹಂಚಲೆಂದು ಮೀಸಲಾಗಿದ್ದ ಅಕ್ಕಿ, ರಾಜ್ಯದ, ಹಾಸನ, ಮಂಗಳೂರು, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಮತ್ತು ಇತರೆ ಜಿಲ್ಲೆಗಳಲ್ಲಿ, ಅದು

ಸೇರಬೇಕಾದ ಫಲಾನುಭವಿಗಳಿಗೆ ತಲುಪದೆ ಯೋಜನೆಯ ಉದ್ದೇಶವನ್ನು ವಿಫಲವಾಗುವಂತೆ ಮಾಡಿ ಕೂಲಿಗಾಗಿ ಕಾಳು ಬದಲು ಕಳ್ಳರಿಗಾಗಿ ಕಾಳು ಆಗಿದೆ. ಈ ಅಕ್ಕಿಯನ್ನು ಬೇರೆ ದೇಶಗಳಿಗೆ ರಫ್ತು ಮಾಡಲಾಗಿದೆಯೆಂದು ತಿಳಿದುಬಂದಿದೆ. ಇದು ರಾಜ್ಯದಲ್ಲಿ ದೊಡ್ಡ ಹಗರಣವಾಗಿದ್ದು ಇಂತಹ ಗಂಭೀರ ವಿಚಾರವನ್ನು ನಿಲುವಳಿ ಸೂಚನೆ ಮೂಲಕ ಚರ್ಚಿಸಲು ಅವಕಾಶ ನೀಡಬೇಕೆಂದು ಈಗಾಗಲೇ ನಾವು ತಮಗೆ ನೋಟೀಸನ್ನು ಕಳುಹಿಸಿಕೊಟ್ಟಿದ್ದೇವೆ. ಇವತ್ತು ನಮ್ಮ ಉಪ ಮುಖ್ಯಮಂತ್ರಿಗಳಿಗೆ ಆ ಭಾಗದಲ್ಲಿ ಇರುವಂತಹ ಜೆಡಿ (ಎಸ್) ಸ್ನೇಹಿತರಿಗೆ ಗೊತ್ತಿದೆ. ತಾವೇ ಚುನಾವಣಾ ಪ್ರಚಾರದ ಸಂದರ್ಭದಲ್ಲಿ, ಯಾವ ಮಟ್ಟದಲ್ಲಿ ಕೂಲಿಗಾಗಿ ಕಾಳು ಯೋಜನೆಯ ವಿಚಾರದಲ್ಲಿ ದುರ್ಬಳಿಕೆಯಾಗಿದೆ, ಲೂಟಿಯಾಗಿದೆ, ದರೋಡೆಯಾಗಿದೆ ಎನ್ನುವ ಮಾತನ್ನು ಹೇಳಿದಿರಿ. ಇದು ಬರೀ ಕೂಲಿಗಾಗಿ ಕಾಳು ಯೋಜನೆಯಲ್ಲಿ ಮಾತ್ರ ದುರುಪಯೋಗವಾಗಿಲ್ಲ. ರೋಜ್‌ಗಾರ್ ಯೋಜನೆಯಲ್ಲಿ ಬಂದಂತಹ ಅಕ್ಕಿ ದುರ್ಬಳಕೆಯಾಗಿದೆ. ಮಧ್ಯಾಹ್ನದ ಬಿಸಿ ಊಟಕ್ಕೆ ಕೊಟ್ಟಂತಹ ಅಕ್ಕಿ ಕೂಡ ಅಲ್ಲಿ ಉಪಯೋಗ ಮಾಡಿಕೊಳ್ಳದೆ ಲೂಟಿ ಮಾಡುವಂತಹ ಕೆಲಸವಾಗಿದೆ. ಪಡಿತರ ವ್ಯವಸ್ಥೆಯಲ್ಲಿ ಹಂಚಬೇಕಾದಂತಹ ಅಕ್ಕಿ, ಗೋಧಿ ದುರ್ಬಳಕೆ ಮಾಡಿಕೊಂಡಿರತಕ್ಕಂಥಾದ್ದು ದಾಖಲೆಗಳು ನಮಗೆ ಸಿಕ್ಕಿವೆ. ಇನ್ನು ಮುಂದುವರೆದು ತನಿಖೆ ಮಾಡುವಂತಹ ಪ್ರಯತ್ನ ಮಾಡಿದರೆ ಪಡಿತರ ವ್ಯವಸ್ಥೆಯಲ್ಲಿ ವಿತರಣೆಯಾಗಬೇಕಾದಂತಹ ಸಕ್ಕರೆ, ಸೀಮೆಎಣ್ಣೆ ಎಲ್ಲಾ ಸೇರಿ ಲೂಟಿಯಾಗಿರುವಂಥ ಅನೇಕ ದಾಖಲೆಗಳು ಇವತ್ತು ನಮ್ಮ ರಾಜ್ಯದಲ್ಲಿ ಸಿಕ್ಕಿದೆ. ಇನ್ನು ಆಶ್ಚರ್ಯಕರ ಸಂಗತಿ ಎಂದರೆ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ 20 ಸಿಓಡಿ ತಂಡಗಳು ರಾಜ್ಯದ ಉದ್ದಗಲಕ್ಕೂ ಈ ರೀತಿ ಲಕ್ಷಾಂತರ ಟನ್ ಅಕ್ಕಿ ದುರ್ಬಳಕೆ ಆಗಿರುವುದರ ಸಂಬಂಧ ತನಿಖೆ ಪ್ರಾರಂಭ ಮಾಡಿದ್ದಾರೆ. ಅನೇಕ ಉನ್ನತಾಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ, ಪೋಲೀಸ್ ಅಧಿಕಾರಿಗಳು ಶಾಮೀಲಾಗಿದ್ದಾರೆ, ಫುಡ್ ಕಾರ್ಪೋರೇಷನ್ ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನುವಂತಾ ಹಾಗೂ ಆ ಸಂದರ್ಭದಲ್ಲಿ ಇದ್ದಂತಹ ಜಿಲ್ಲಾ ಉಸ್ತುವಾರಿ ಸಚಿವರುಗಳೇ ಈ ದುರ್ಬಳಕ್ಕೆ ಅವಕಾಶ ಮಾಡಿಕೊಟ್ಟಿರುವಂಥಾದ್ದು ಎಲ್ಲಾ ಸಹ ಇವತ್ತು ಬೆಳಕಿಗೆ ಬಂದಿದೆ. ಮಾನ್ಯ ಅಧ್ಯಕ್ಷರೆ ಕ್ಷಮಿಸಬೇಕು, ನಾನು ಆ ಮನೆಯಿಂದ ಇಲ್ಲಿಗೆ ಬಂದಿದ್ದೇನೆ. ಆಶ್ಚರ್ಯಕರ ಸಂಗತಿ ಎಂದರೆ ಇದೇ ಮನೆಯಲ್ಲಿ ಈ ಬಗ್ಗೆ ವ್ಯಾಪಕವಾದಂಥ ಚರ್ಚೆಯಾಗಿ, ನಾವು ಪ್ರತಿಪಕ್ಷದವರು ಧರಣಿ ಕುಳಿತು ಆಗ್ರಹ ಮಾಡಿದಂಥ ಸಂದರ್ಭದಲ್ಲಿ ಒಂದು ಜಂಟಿ ಸದನ ಸಮಿತಿ ಮಾಡಿ, ಇವತ್ತು ಒಂಬತ್ತೂವರೆ ಲಕ್ಷ ಮೆಟ್ರಿಕ್ ಟನ್ ಅಕ್ಕಿ ಕೇಂದ್ರ ಸರ್ಕಾರದಿಂದ ಬಂದಿದ್ದು ಅದರ ಜೊತೆಗೆ ದೊಡ್ಡ ಪ್ರಮಾಣದಲ್ಲಿ ಹಣ ಕೂಡ ಬಂದಿದ್ದು, ಅದು ದುರುಪಯೋಗವಾಗಿದೆ. ಇದನ್ನು ಜಂಟಿ ಸಲಹಾ ಸಮಿತಿಯ ಎರಡು ಮನೆ ಸದಸ್ಯರು, ಆಡಳಿತ ಪಕ್ಷದ ಅಧ್ಯಕ್ಷರ ನೇತೃತ್ವದಲ್ಲಿ ನಾವು ಹೋಗಿ ನೋಡುವಂತಹ ಪ್ರಯತ್ನ ಮಾಡಿದರೆ, ಇನ್ನು ಮುಂದೆ ಈ ರೀತಿ ದುರ್ಬಳಕೆ ಆಗುವಂಥದ್ದು ಲೂಟಿಯಾಗುವಂಥಾದ್ದು ನಿಲ್ಲುತ್ತದೆ ಎಂದು ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡಿದೆವು. ದುರ್ದೈವ ಎಂದರೆ ನಾವು ವೆಲ್‌ನಲ್ಲಿ ಕುಳಿತಾಗ ಡೆವಲಪ್‌ಮೆಂಟ್ ಕಮಿಷನ್‌ರವರಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದ್ದು, ಆ ತನಿಖೆ ಪ್ರಾರಂಭವಾಗದೆ ಅದು ಅಲ್ಲೇ ನಿಂತಿದ್ದು ಇವತ್ತು ಇದರ ಪರಿಣಾಮ ಇಷ್ಟು ಪ್ರಮಾಣದಲ್ಲಿ ಅಕ್ಕಿ ಮತ್ತು ಗೋಧಿ ಕಳ್ಳಸಾಗಾಣಿಕೆ ಆಗುತ್ತಿರತಕ್ಕಂಥಾದ್ದು

ರಾಜ್ಯದಲ್ಲಿ ಪ್ರಾರಂಭವಾಗಿದೆ. ಈ ಬಡವರ ತುತ್ತಿನ ಚೀಲ ತುಂಬಬೇಕಾದಂತಹ ಅಕ್ಕಿ ವಿದೇಶಕ್ಕೆ ರವಾನೆ ಮಾಡುವಂತಹ ಕೋಟ್ಯಾಂತರ ರೂಪಾಯಿ ವಂಚನೆ ಬೃಹತ್ ಜಾಲವಾಗಿ ಬೆಳೆದು ಮಂಗಳೂರಿನಲ್ಲಿ ಇದು ಪತ್ತೆಯಾಗಿ ದೇಶವ್ಯಾಪ್ತಿ ಸುದ್ಧಿಯಾಗಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಗ ಒಂದು ಮಾತು ಪದೇಪದೇ ನಾವು ಕೇಳುತ್ತಿದ್ದೆವು. ಕೇಂದ್ರ ಸರ್ಕಾರ ಪಕ್ಕದ ರಾಜ್ಯಗಳಿಗೆ ಏನು ಅಕ್ಕಿಯನ್ನು ಕೊಟ್ಟಿದೆ ಕೂಲಿಗಾಗಿ ಕಾಳು ಯೋಜನೆಯಲ್ಲಿ ಬರಗಾಲಕ್ಕೆ ಅಷ್ಟು ಪ್ರಮಾಣದಲ್ಲಿ ಕರ್ನಾಟಕ ರಾಜ್ಯಕ್ಕೆ ಕೊಡುತ್ತಿಲ್ಲವೆನ್ನುವಂತಹ ಕೂಗನ್ನು ನಾವು ಕೇಳಿದ್ದೆವು. ಅದರ ಅರ್ಥ ಏನು? ಕೇಂದ್ರ ಸರ್ಕಾರ ಕೊಟ್ಟಂತಹ ಒಂಬತ್ತೂವರೆ ಲಕ್ಷ ಮೆಟ್ರಿಕ್ ಟನ್ ಅಕ್ಕಿ ಹಾಗೂ ಹಣ ಆ ಬಡವನಿಗಾಗಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಉಪಯೋಗವಾಗಿದ್ದರೆ ಹೆಚ್ಚು ಪ್ರಮಾಣದಲ್ಲಿ ಅಕ್ಕಿಯನ್ನು ಕೇಳುವುದಕ್ಕೆ ಅರ್ಥ ಬರುತ್ತಿತ್ತು. ಆದರೆ ಇಲ್ಲಿ ಹೆಚ್ಚು ಬರಲಿಲ್ಲವೆಂದು ಬೊಬ್ಬೆ ಹಾಕುವಂಥದ್ದು, ಹೆಚ್ಚು ಪ್ರಮಾಣದಲ್ಲಿ ಅಕ್ಕಿ ಬಂದರೆ ನಾವು ತಿಂದು ತೇಗುವುದಕ್ಕೆ ಹಾಗೂ ಲೂಟಿ ಮಾಡುವುದಕ್ಕೆ ಅನುಕೂಲವಾಗುತ್ತದೆನ್ನುವ ಭಾವನೆ ಅವತ್ತಿನ ಆಡಳಿತ ಪಕ್ಷಕ್ಕೆ ಇದ್ದಂತಾದ್ದು, ಇವತ್ತು ಅದೇ ಆಡಳಿತ ಮುಂದುವರೆದಿದ್ದು, ಇದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಜಿಲ್ಲಾ ಸಚಿವರುಗಳ ಕೈವಾಡ ಇತ್ತು ಎನ್ನುವುದರ ಬಗ್ಗೆ ಮೊನ್ನೆ ನಡೆದಂತಹ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಾವು ತನಿಖೆ ಮಾಡುವಂತಹ ಪ್ರಯತ್ನ ಮಾಡಿದರೆ ಬಹುಶಃ ಎರಡರಿಂದ ಐದು ಕೋಟಿ ರೂಪಾಯಿಗಳವರೆ ವಿಧಾನಸಭಾ ಕ್ಷೇತ್ರದಲ್ಲಿ ಖರ್ಚಾಯಿತು. ಬಡವರಿಗಾಗಿ ಬಂದಂತಹ ಕೂಲಿಗಾಗಿ ಕಾಳು ಯೋಜನೆ ಹಾಗೂ ಪಡಿತರ ವ್ಯವಸ್ಥೆಯಲ್ಲಿ ಹಂಚಬೇಕಾದಂತಹ ಅಕ್ಕಿ ಗೋಧಿ ದುರುಪಯೋಗವಾಗಿ, ಹಣವನ್ನು ಮನಬಂದಂತೆ ಚುನಾವಣಾ ಸಮಯದಲ್ಲಿ ಖರ್ಚು ಮಾಡಿರುವುದು ನಾವು ತನಿಖೆ ಮಾಡಿದರೆ ಗೊತ್ತಾಗುತ್ತದೆ.

12.40 ಪಿಎಂ

ಬಹಳ ಆಶ್ಚರ್ಯಕರವಾದಂತಹ ಸಂಗತಿ ಎಂದರೆ, ಇಡೀ ರಾಜ್ಯದ ಜನರ ಗಮನವನ್ನು ಸೆಳೆದಿರುವಂಥಾದ್ದು ಕೂಲಿಗಾಗಿ ಕಾಳು ಯೋಜನೆಯಲ್ಲಿ, ತಂದಂಥ ಅಕ್ಕಿ ಲಕ್ಷಾಂತರ ಟನ್ ದುರುಪಯೋಗುವಾಗುತ್ತಿದೆ, ಎನ್ನುವ ಮಾತನ್ನು ನಾವು ಕೇಳುತ್ತಿದ್ದೇವೆ. ಆದರೆ ಇವತ್ತು ಫುಡ್ ಕಾರ್ಪೋರೇಷನ್‌ನಿಂದ, ದಿನಾಂಕ 21–5–2004ರಂದು 7 ಲಾರಿ ಲೋಡ್ ಗೋಧಿ, ಅದು 903 ಕ್ವಿಂಟಾಲ್ ಗೋಧಿ ಇತ್ತು, ಇದು ಬೆಂಗಳೂರು ನಾರ್ತ್ ಮತ್ತು ಸೌತ್‌ಗಳಿಗೆ ಪಡಿತರ ವ್ಯವಸ್ಥೆಯಲ್ಲಿ ಹಂಚಬೇಕಾದಂತಹ ಗೋಧಿಯಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೇ I rise to a point of Order. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸುತ್ತಿದ್ದಾರಾ ಅಥವಾ ವಿಚಾರವನ್ನು ಸಂಪೂರ್ಣವಾಗಿ, ಎಲ್ಲಾ ಡಿಟೈಲ್‌ಗಳನ್ನು ಪ್ರಸ್ತಾಪ ಮಾಡುವುದಕ್ಕೆ, ತಾವು ಅನುಮತಿಯನ್ನು ಕೊಟ್ಟಿದ್ದಿರಾ ಎಂಬ ಬಗ್ಗೆ ನಮಗೆ ಗೊತ್ತಾಗುತ್ತಿಲ್ಲ. The Hon'ble Leader of Opposition is going into all the details. ಅವರಿಗೆ ಆ ಹಕ್ಕು ಇದೆ, ಆದರೆ ತಾವು ಅನುಮತಿಯನ್ನು ಕೊಡಬೇಕಾಗುತ್ತದೆ. ನಮಗೆ ಏನು ಸಂದಿಗ್ಧತೆ ಎಂದರೆ, ತಾವು ಎಲ್ಲಾ ವಿವರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟು, ಮುಂದುವರೆಯುವುದಕ್ಕೆ, ಅವಕಾಶವನ್ನು

ಕೊಟ್ಟಿದ್ದೀರಾ ಅಥವಾ ತಮ್ಮ ಮನವೊಲಿಸುವುದಕ್ಕೆ, ಪ್ರಾಥಮಿಕವಾಗಿ ಅವರು ಪ್ರಯತ್ನ ಮಾಡುತ್ತಿದ್ದಾರೆ? ಇವುಗಳ ಬಗ್ಗೆ ತಿಳಿಯಬೇಕು. We would like to know from the Chair. Please clarify the position.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಪ್ರಯತ್ನ ಮಾಡುತ್ತಿರುವಂಥಾದ್ದು, ಹಿರಿಯ ಸದಸ್ಯರಾದಂತಹ ಶ್ರೀ ರಮೇಶ್‌ಕುಮಾರ್‌ರವರು ಸದನದಲ್ಲಿ ಅಧ್ಯಕ್ಷರಾಗಿದ್ದಾಗ ನಮಗೆಲ್ಲರಿಗೂ ಮಾರ್ಗದರ್ಶನ ಮಾಡಿದಂಥವರು, ನಾನು ತಮಗೆ ಮನವರಿಕೆ ಮಾಡಬೇಕಾದರೆ, ಈ ವಿಚಾರವನ್ನು ಏಕೆ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡುತ್ತಿದ್ದೇವೆಂದರೆ, ಇದು ರಾಜ್ಯದಾದ್ಯಂತ ಹರಡಿರುವಂಥಾದ್ದು, ಜನರಿಗೆ ತಲುಪಬೇಕಾಗಿರುವ ಮಧ್ಯವರ್ತಿಗಳ ಪಾಲು ಆಗಿ ಲೂಟಿಯಾಗುತ್ತಿರುವಂಥಾದ್ದು, ಪರೋಕ್ಷವಾಗಿ ಇದಕ್ಕೆ ಸರ್ಕಾರ ಬೆಂಬಲವಾಗಿ ನಿಂತಿರುವಂಥಾದ್ದು, ಸಮರ್ಪಕವಾಗಿ ತನಿಖೆ ಮಾಡುತ್ತೇವೆಂದು ಹೇಳಿ, ಲೂಟಿ ಮಾಡುವಂಥಾದ್ದು ನಡೆದಿದೆ, ನಿನ್ನೆ ಸುಮಾರು ಮೂರೂವರೆ ಗಂಟೆಯ ಸಮಯದಲ್ಲಿ, ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಮತ್ತು ಮೇಲ್ಮನೆಯ ಸದಸ್ಯರಾದಂತಹ ಶ್ರೀ ರಾಮಚಂದ್ರಗೌಡರು ಇವರೊಡನೆ, ಒಂದು ಸ್ಥಳಕ್ಕೆ ಭೇಟಿ ನೀಡಿದ್ದೆವು. ಈ ವಿಷಯವನ್ನು ಪ್ರಸ್ತಾಪ ಮಾಡಿ ನಿಲ್ಲಿಸುತ್ತೇನೆ, ಉಳಿದವರು ವಿಷಯವನ್ನು ಪ್ರಸ್ತಾಪ ಮಾಡಲಿ, ನಂತರ ತಾವು ಚರ್ಚೆಗೆ ಅನುಮತಿ ಕೊಟ್ಟ ಮೇಲೆ ಇದರ ಬಗ್ಗೆ ವಿಚಾರವಾಗಿ ಮಾತನಾಡುತ್ತೇನೆ. ಇದು ವಿಶೇಷವಾದ ಇನ್ನೊಂದು ತಿರುವು ಏನು ಪಡೆದಿದೆ ಎಂದರೆ, ಪಡಿತರ ವ್ಯವಸ್ಥೆಯಲ್ಲಿ ಹಂಚಬೇಕಾದಂತಹ ಗೋಧಿ, ಎಳು ಲಾರಿ ಲೋಡ್, ಚಾಮುಂಡೇಶ್ವರಿ ಫ್ಲೋರ್ ಮಿಲ್ಲ್‌ಗೆ ತಲುಪಿದೆ, ಫುಡ್ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳಿಗೆ ಅನುಮಾನ ಬಂದು, ಅದರ ಬೆನ್ನು ಹತ್ತಿದರು, ಇದು ನೇರವಾಗಿ "ಚಾಮುಂಡೇಶ್ವರಿ ಫ್ಲೋರ್ ಮಿಲ್ಲ್"ಗೆ ಹೋಗಿ, ಅಲ್ಲಿ ಹಿಟ್ಟು ಆಗಿ, ಅದನ್ನು ಹೊರ ದೇಶಗಳಿಗೆ ಕಳುಹಿಸುವಂತಹ ಪ್ರಯತ್ನ ನಡೆಯುತ್ತಿತ್ತು, ನಾವು ಇಲ್ಲಿಗೆ ನಿನ್ನೆ ಹೋಗಿದ್ದೆವು. ನಾವು ಅಲ್ಲಿಗೆ ಹೋಗಿ ಪೊಲೀಸ್ ಅಧಿಕಾರಿಯವನ್ನು ಕರೆಸಿ, ಮಾತನಾಡಿದೆವು, ಅಲ್ಲಿ ಸುಮಾರು 7–8 ಸಾವಿರ ಕ್ವಿಂಟಾಲ್ ಗೋಧಿ ಸ್ಟಾಕ್ ಇದೆ, ಫುಡ್ ಕಾರ್ಪೋರೇಷನ್ ಇಂಡಿಯಾ, ಬೇರೆ ಬೇರೆ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಸಂಬಂಧಪಟ್ಟಂಥಾದ್ದು, ಇಲಾಖೆಗೆ ಸಂಬಂಧಪಟ್ಟಂಥಾದ್ದು ಅಲ್ಲಿ ಸ್ಟಾಕ್ ಆಗುತ್ತಿರುವಂಥಾದ್ದನ್ನು ನಾವು ಕಣ್ಣಾರೆ ನೋಡಿ ಬಂದಿದ್ದೇವೆ, ಇದು 21ನೇ ತಾರೀಖಿನಂದು ಸೀಜ್ ಆದರೆ 22ನೇ ತಾರೀಖುವರೆಗೂ ಕೇಸ್ ಬುಕ್ ಆಗುವುದಿಲ್ಲ. ಇವತ್ತಿನವರೆಗೂ "ಫುಡ್ ಕಾರ್ಪೋರೇಷನ್"ನವರು ಯಾವ ಸಂಸ್ಥೆಯವರು ತೆಗೆದುಕೊಂಡು ಹೋಗಿದ್ದರು, ಅವರನ್ನು ಆರೆಸ್ಟ್ ಮಾಡಿಲ್ಲ, ಅಲ್ಲಿ ಏಳು ಲಾರಿಗಳು ಹಾಗೆಯೇ ನಿಂತಿದೆ, ಮಿಲ್ ಒಳಗೆ ಹತ್ತಾರು ಸಾವಿರ ಗೋಧಿ ಚೀಲಗಳು ಹಾಗೆಯೆ ಇವೆ. ಈ ರೀತಿಯಾಗಿ ನಿರಂತರವಾಗಿ ದುರ್ಬಳಕೆಯಾಗುತ್ತಿದ್ದರೂ ಸಹ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಅದನ್ನು ತಿರುಚುವಂತಹ ಪ್ರಯತ್ನ ಪ್ರಭಾವಿ ರಾಜಕಾರಣಿಗಳು ಮಾಡುತ್ತಿದ್ದಾರೆಂಬ, ಅನುಮಾನವೂ ಬಂದಿರುವುದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡುತ್ತಿರುವಂಥಾದ್ದು, ಮಾನ್ಯ ಸದಸ್ಯರೆಲ್ಲರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿ, ಇದು ರಾಜ್ಯದ ಇತಿಹಾಸದಲ್ಲಿ ದೊಡ್ಡ ಹಗರಣವಾಗಿರುವುದರಿಂದ, "ನಕಲಿ ಛಾಪ ಕಾಗದ–ದ ಹಗರಣದ

ನಂತರ ಇದು ಒಂದು ದೊಡ್ಡ ಹಗರಣವಾಗಿರುವುದರಿಂದ, ಇದರ ಬಗ್ಗೆ ಸಮರ್ಪಕವಾದಂತಹ ತನಿಖೆಯಾಗಬೇಕು. ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲೂ ಇದು ನಡೆಯುತ್ತಿರಬಹುದು, ಇದು ಕರ್ನಾಟಕ ರಾಜ್ಯದಲ್ಲಿ ಮಾತ್ರ ನಡೆಯುತ್ತಿದೆ, ಎಂದು ನಾನು ತಿಳಿದುಕೊಳ್ಳುವುದಿಲ್ಲ. ನನ್ನ ಒತ್ತಾಯವೇನೆಂದರೆ, ಹಿಂದೆ ನಮ್ಮ ಜೆಡಿ (ಎಸ್) ನಾಯಕರು ಮತ್ತು ನಾವೆಲ್ಲರೂ ಸೇರಿ, ಜಂಟಿ ಸದನ ಸಮಿತಿಯಿಂದ ಇದು ತನಿಖೆಯಾಗಬೇಕೆಂದು, ಅಗ್ರಹ ಮಾಡಿದ್ದೆವೋ, ಅದೇ ರೀತಿಯಲ್ಲಿ ಈಗಲೂ ಸಹ, ನಾನು ತಮ್ಮಲ್ಲಿ ಕೇಳಿಕೊಳ್ಳುವಂಥಾದ್ದು, ಎಲ್ಲಾ ಸದಸ್ಯರುಗಳ ಮಾತುಗಳನ್ನು ಕೇಳಿದ ಮೇಲೆ, ಇದನ್ನು ಜಂಟಿ ಸದನ ಸಮಿತಿಯಿಂದ ತನಿಖೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟರೆ, ಇದರಲ್ಲಿ ಸರ್ಕಾರ ಏನು ಮುಚ್ಚಿಡುತ್ತಿಲ್ಲವೆನ್ನುವ ವಿಚಾರವೂ ಸ್ಪಷ್ಟವಾಗುತ್ತದೆ. ನಾವು ಸಂಸ್ಥೆಗಳಿಗೆ ಹೋಗಿ ಕೂಲಂಕುಷವಾಗಿ ಪರಿಶೀಲನೆಯನ್ನು ಮಾಡಿ, ಇನ್ನು ಮುಂದೆ ಈ ರೀತಿಯಾಗಿ ಲೂಟಿ ಮಾಡುವಂಥಾದ್ದನ್ನು ತಡೆಯಬಹುದು. ಮತ್ತೆ ನಿಷ್ಪಕ್ಷಪಾತವಾದಂತಹ ತನಿಖೆ ಮಾಡಿ, ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಬಹುದು, ಮತ್ತೆ ಇಂಥಾದ್ದು ಪುನರಾವರ್ತನೆಯಾಗದಂತೆ ತಡೆಯಬಹುದು, ಅದುದರಿಂದ ತಾವು ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕು, ನನ್ನ ಬಳಿ ಹೆಚ್ಚು ವಿವರಗಳು, ದಾಖಲೆಗಳು ನನ್ನಲ್ಲಿ ಇವೆ, ನಾನು ಅದನ್ನು ಕೊಡುತ್ತೇನೆ, ತಾವು ಇದನ್ನು ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡುವುದಕ್ಕೆ, ಅವಕಾಶ ಮಾಡಿಕೊಡಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ವಿಚಾರವನ್ನು, ಕ್ರಿಯಾಲೋಪದ ಮೂಲಕವಾಗಿ, ತಮ್ಮ ಗಮನವನ್ನು ಮಾನ್ಯ ರಮೇಶ್ ಕುಮಾರ್‌ರವರು ಸೆಳೆದಿದ್ದಾರೆ, ಇಲ್ಲಿ ನಾವು ಮೂಲಭೂತವಾಗಿ ಚರ್ಚೆ ಮಾಡಬೇಕಾಂಥಾದ್ದು ಈ ನಿಲುವಳಿ ಸೂಚನೆಯನ್ನು, ಒಟ್ಟಿಗೆ ತೆಗೆದುಕೊಂಡು ಚರ್ಚೆಗೆ ಹಾಕಲು, ಮೊದಲು ತಮ್ಮ ಮನವೊಲಿಸುವಂಥಾದ್ದು ಮೊದಲನೆಯ ಜವಾಬ್ದಾರಿಯಾಗಿದೆ, ನಿಲುವಳಿ ಸೂಚನೆಯಲ್ಲಿರತಕ್ಕಂಥ ಎಲ್ಲಾ ಪ್ರಸ್ತಾಪಗಳನ್ನು, ತಾವು ಅನುಮತಿ ಕೊಡುವ ಪೂರ್ವದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ಆದುದರಿಂದ ಇಲ್ಲಿ ಅವರು ನಿಲುವಳಿ ಸೂಚನೆಯನ್ನು ಕೊಡುವಂಥ ಅಗತ್ಯತೆ ಏನು ಇದೆ? ಇತ್ತೀಚಿನ ದಿವಸಗಳಲ್ಲಿ ಆಗಿರುವಂತಹ ಸಾರ್ವಜನಿಕವಾಗಿ ಬಹಳ ಮಹತ್ವವಾದಂತಹ, ಈ ವಿಚಾರಗಳು ಬೇರೆ ಅನರ್ಹತೆಗೆ ಒಳಪಡದೇ ಇರತಕ್ಕಂಥ ಕಾರಣಗಳು ನಮ್ಮ ನಿಯಮಾವಳಿಗಳಲ್ಲಿ ಇವೆ, ಅವುಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ತಮ್ಮ ಮುಂದೆ ಪ್ರಸ್ತಾಪ ಮಾಡಬೇಕು. ಇದರ ಬಗ್ಗೆ ನಿಯಮಾವಳಿ-ಗಳಲ್ಲಿ ಈ ವಿಚಾರಗಳನ್ನು ತಿಳಿಸಲಾಗಿದೆ, ಇಲ್ಲಿ ನಿಯಮ 60ರ ಅಡಿಯಲ್ಲಿ ಕೊಟ್ಟಾಗ, ಈ ನಿಯಮ 68ರ ಕೆಳಗೆ ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ಕೆಳಕಂಡ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು, ಆ ನಿರ್ಬಂಧಗಳು ಏನೇನು ಇವೆ, ಆ ನಿರ್ಬಂಧಗಳನ್ನು ಮೀರಿ, ಇದು ಅತ್ಯಂತ ಜರೂರು ಮತ್ತು ಮಹತ್ವವಾಗಿರುವಂತಹ ವಿಷಯ, ಎನ್ನುವುದರ ಬಗ್ಗೆ ಅವರು ಮನವರಿಕೆಯನ್ನು ಮಾಡಿಕೊಡಬೇಕು, ಆ ರೀತಿ ಅವರು ಮನವರಿಕೆಯನ್ನು ಮಾಡಿಕೊಟ್ಟ ನಂತರ, ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನಾನು ಒಪ್ಪಿಗೆ ಸೂಚಿಸಿದ್ದೇನೆಂದು ತಾವು ಸೂಚಿಸಿದಾಗ, ಆ ನಿಲುವಳಿ ಸೂಚನೆಯ

ಮೂಲಕ ಅವರು ಇಡೀ ವಿಚಾರವನ್ನು, ಪ್ರಸ್ತಾಪ ಮಾಡಬೇಕು, ಇನ್ನು ಎರಡನೆಯದಾಗಿ, ಮಹತ್ವವಾದಂತಹ ವಿಚಾರದ ಬಗ್ಗೆ ಕೌಲ್ ಅಂಡ್ ಶಕ್ದರ್‌ನಲ್ಲಿ ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ.

"It has been held that an adjournment motion on a matter which can be raised during a debate on a motion of thanks on the President's address, budget discussion, motion on an international situation, motion regarding a matter of public importance such as food policy, etc., to be held in the same session is not in order." ಇವತ್ತು ಇಲ್ಲಿ ಪಾರ್ಲಿಮೆಂಟ್‌ಗೆ ಅನ್ವಯವಾಗುತ್ತದೆ, ಅದು ಈ ಸದನಕ್ಕೂ ಕೂಡ ಅನ್ವಯವಾಗುತ್ತದೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯಕ್ಕೆ ಸಂಬಂಧಪಟ್ಟಿರುವಂತೆ ಇಲ್ಲಿ ಕರೆದಾಗ, ಇಂತಹ ವಿಚಾರಗಳು 'It is not in order' ಎಂದು ಶಕ್ದರ್ ಅಂಡ್ ಕೌಲ್‌ನವರು ಪ್ರಸ್ತಾಪ ಮಾಡುತ್ತಾರೆ. ಮತ್ತೊಂದು ವಿಚಾರವನ್ನು ಮಾನ್ಯ ಹಿರಿಯ ಸದಸ್ಯರಿಗೆ ತಿಳಿಯಪಡಿಸುವುದೆನೆಂದರೆ:

"It has been held that an adjournment motion on a matter which can be raised during a debate on a motion of thanks on the President's address, budget discussion, motion on an international situation, motion regarding a matter of public importance such as food policy, etc., to be held in the same session is not in order. Similarly, a matter which can be raised under any other procedure or device calling attention notices, questions, short notice questions, half-an-hour discussion, short duration discussion cannot be raised through an adjournment motion".

That is not applicable here. But, what is applicable is when a particular session is seized of the matter of motion of thanks to the Governor's address, any other matter connected with this is not in order."

Therefore, I humbly submit to you Mr. Speaker, that it is not in order. Therefore, it has to be dis-allowed. Even otherwise also, if you feel that is a matter of very great urgency, ಇದನ್ನು ತಾವು ಗಮನಿಸಬೇಕು. ಇದನ್ನು ತಾವು ತೆಗೆದುಕೊಳ್ಳಲೇ ಬೇಕೆಂದು ಆದರೆ, ನಿಲುವಳಿ ಸೂಚನೆಯ ಮೂಲಕವಾಗಿ ತೆಗೆದುಕೊಳ್ಳಲಿಕ್ಕೆ, ಅದು ಯಾವುದು ಕ್ರಮಬದ್ಧವಾಗಿ ಇಲ್ಲವೋ, ಈ ಕ್ರಮಬದ್ಧವಲ್ಲದ ನಿಲುವಳಿ ಸೂಚನೆಯನ್ನು ನಮ್ಮ ಸರ್ಕಾರ ಮುಕ್ತವಾಗಿ ಚರ್ಚೆ ಮಾಡಲು ಅವಕಾಶ ಮಾಡಿಕೊಡುವುದಿಲ್ಲವೆನ್ನುವಂಥ ಅಪಾದನೆಗೆ ಗುರಿಯಾಗಲು ನಾವು ತಯಾರಿಲ್ಲ; ಈ ಬಗ್ಗೆ ನಾವು ತೆಗೆದುಕೊಳ್ಳಬೇಕಾದಂತಹ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿರುವಂತಹ ಹಿನ್ನಲೆಯಲ್ಲಿ, ಮತ್ತೊಂದು ರೂಪದಲ್ಲಿ ಹಿಂದೆ ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ, ಮತ್ತೆ ಬೇರೆ ಸ್ಪೀಕರ್‌ಗಳು ಇದ್ದಂತಹ ಸಂದರ್ಭಗಳಲ್ಲಿ ಕೂಡ, ಬೇರೆ ರೂಪದಲ್ಲಿ ಚರ್ಚೆಗೆ

ತೆಗೆದುಕೊಳ್ಳುವಂತಹ ಅವಕಾಶ ಕೂಡ ಇದೆ. ಈಗ ಇದು ಸರಿಯಾದಂತಹ, ಸಕ್ರಮವಾದಂತಹ ರೀತಿಯಲ್ಲಿ ಇಲ್ಲ, it is not in order. ಆ ಕಾರಣಕ್ಕಾಗಿ ಇದನ್ನು ತಿರಸ್ಕಾರ ಮಾಡಿ, ಬೇರೆ ರೂಪದಲ್ಲಿ ತೆಗೆದುಕೊಳ್ಳುವಂತಹ ಸಾಧ್ಯತೆ ಕೂಡ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ತಾವು ಆ ಪೀಠದಲ್ಲಿ ಕುಳಿತಿದ್ದೀರಿ, ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರ, ಸಂಸದೀಯ ಸಚಿವರಾಗಿ ಇದ್ದಾರೆ, ಅವರಿಗೆ ಅನುಭವವೂ ಇದೆ, ಅವರು ಇಲ್ಲೇ ಕುಳಿತು ಕಾರ್ಯಕಲಾಪಗಳಲ್ಲಿ ತಮ್ಮದೇ ಆದಂತಹ ರೀತಿಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೀರಿ, ಮತ್ತೆ ಮಾನ್ಯ ಹಿರಿಯ ಸದಸ್ಯರಾದ ರಮೇಶ್ ಕುಮಾರ್‌ರವರು ಅಲ್ಲಿ ಕುಳಿತ್ತಿದ್ದಾರೆ, ಈಗ ಇರುವಂತಹ ಪ್ರಶ್ನೆ ಏನೆಂದರೆ, ಈ ನಿಲುವಳಿ ಸೂಚನೆ ಸಾರ್ವಜನಿಕ ಮಹತ್ವವಾದಂತಹ ವಿಷಯವಲ್ಲವೋ? ಇದರ ಬಗ್ಗೆ ಹೌದೊ, ಅಲ್ಲವೋ, ಎಂಬ ಬಗ್ಗೆ ಆಡಳಿತ ಪಕ್ಷದಲ್ಲಿ ಕುಳಿತಿರುವಂತಹ ಯಾರಾದರೂ ಒಬ್ಬ ಸದಸ್ಯರು ಇದು ಸಾರ್ವಜನಿಕ ಮಹತ್ವವಾದಂತಹ ವಿಷಯವಲ್ಲವೆಂದು, ಇದನ್ನು ಬೇರೆ ಯಾವ ಸಂದರ್ಭದಲ್ಲಿ ಬೇಕಾದರೂ ತೆಗೆದುಕೊಳ್ಳಬಹುದೆಂದು ಹೇಳಲಿ...

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಈ ವಿಚಾರವನ್ನು ಸಾರ್ವಜನಿಕ ಮಹತ್ವ ವಿಚಾರವಲ್ಲ. ಹೌದು, ಎಂಬ ಯಾವ ವಿಚಾರವನ್ನೂ ಹೇಳಿಲ್ಲ. I only referred to the rules.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಹೆಸರನ್ನು ಪ್ರಸ್ತಾಪ ಮಾಡಲಿಲ್ಲ, ಮಾನ್ಯ ಸಂಸದೀಯ ಸಚಿವರು ಪ್ರಸ್ತಾಪ ಮಾಡಿದರು.

ನಾನು ನಿಮ್ಮ ಹೆಸರನ್ನೇ ಪ್ರಸ್ತಾಪ ಮಾಡಲಿಲ್ಲ. ಸಂಸದೀಯ ಸಚಿವರಾದ ಪ್ರಕಾಶ್‌ರವರಿಗೆ ಪ್ರಸ್ತಾಪ ಮಾಡಿದೆ. ನಿಯಮ 62 ಏನು ಹೇಳುತ್ತದೆ ಎಂದರೆ "62–ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ಕೆಳಕಂಡ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದು. (i) ಒಂದು ಉಪ–ವೇಶನದಲ್ಲಿ ಅಂಥ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಯನ್ನು ಕೊಡತಕ್ಕದ್ದಲ್ಲ" ಇದು ಇಲ್ಲಿ ಅಪ್ಲೈ ಆಗುವುದಿಲ್ಲ. "(ii) ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಚರ್ಚಿಸಕೂಡದು". ಒಂದಕ್ಕಿಂತ ಹೆಚ್ಚು ವಿಷಯವನ್ನು ನಾವು ಪ್ರಸ್ತಾಪ ಮಾಡಿಲ್ಲ. "(iii) ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೆ ಸೀಮಿತವಾಗಿರಬೇಕು". ಇತ್ತೀಚೆಗೆ ನಡೆದಂತ ಘಟನೆ ಇದು. "(iv) ನಿಲುವಳಿ ಸೂಚನೆಯು ಹಕ್ಕುಬಾಧ್ಯತೆಯನ್ನು ಪ್ರಶ್ನಿಸುವಂತಿರಕೂಡದು." ನಾನು ಆ ಪ್ರಶ್ನೆಯನ್ನು ಮಾಡುತ್ತಿಲ್ಲ. "(v) ಅದೇ ಅಧಿವೇಶನದಲ್ಲಿ ಚರ್ಚೆಯಾಗಿರುವ ವಿಷಯದ ಮೇಲೆ ಪುನಃ ಚರ್ಚೆಗಾಗಿ ನಿಲುವಳಿ ಸೂಚನೆ ಇರತಕ್ಕುದಲ್ಲ". ಅಂದರೆ ನಿಯಮ 60, 61, 62ರಲ್ಲಿ ಏನು ನಿಯಮಗಳನ್ನು ಅನುಸರಿಸ ಬೇಕೋ, ನಾವೇ ಮಾಡಿಕೊಂಡಂಥ ಕಾನೂನು ಚೌಕಟ್ಟಿನಲ್ಲಿ ಏನು ನಿಯಮಗಳನ್ನು ಅನುಸರಿಸ ಬೇಕೋ, ಅದೆಲ್ಲಕ್ಕೂ ಬದ್ಧನಾಗಿ, ಇದಕ್ಕೆ ಈ ನಿಯಮಗಳು ಅನ್ವಯವಾಗುತ್ತವೆ ಎನ್ನುವ ಆಧಾರದ ಮೇಲೆ ನಾನು ಇಲ್ಲಿ ನಿಂತಿದ್ದೇನೆ. ಸನ್ಮಾನ್ಯ ಸಂಸದೀಯ ಸಚಿವರಾದ ಪ್ರಕಾಶ್‌ರವರು ಹೇಳಿದರು, ಸಭಾಪೀಠದಲ್ಲಿ ಕುಳಿತಿರುವಂಥ ಅಧ್ಯಕ್ಷರಾದ ತಾವು ನಮ್ಮೆಲ್ಲರ ಅರ್ಗ್ಯೂಮೆಂಟನ್ನು ಕೇಳಿದ ಮೇಲೆ ಇದನ್ನು ನಿಯಮ 60ರಡಿಯಲ್ಲಿ ತೆಗೆದುಕೊಳ್ಳಬೇಕೋ ಅಥವಾ ಬೇರೆ ನಿಯಮಾವಳಿಯಲ್ಲಿ ತೆಗೆದು

ಕೊಳ್ಳಬೇಕೋ ಎಂದು ತೀರ್ಮಾನಿಸುವುದು ನಿಮಗೆ ಬಿಟ್ಟಿದ್ದು. ಇಲ್ಲಿರುವಂಥ ಎಲ್ಲಾ ಹಿರಿಯ ಸಚಿವರಿಗೆ ಗೊತ್ತಿದೆ, ಹಿಂದೆ ಇಲ್ಲಿ ನಿಯಮ 60ರ ಪ್ರಕಾರ ಪ್ರಸ್ತಾಪ ಮಾಡಿ, 6–8 ಗಂಟೆಗಳ ಕಾಲ ಚರ್ಚೆ ಮಾಡಿದ ನಂತರ ಇದು ನಿಯಮ 60ರಡಿಯಲ್ಲಿ ಬರುವುದಿಲ್ಲ, ಬೇರೆ ನಿಯಮಾವಳಿಗಳ ಪ್ರಕಾರ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿ ಎರಡೆರಡು ದಿವಸ ಚರ್ಚೆಯಾದ ಉದಾಹರಣೆಗಳಿವೆ. ಆದರೆ ಇವತ್ತು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಸಮಯದಲ್ಲಿ ಬೇರೆಯದನ್ನು ತೆಗೆದುಕೊಳ್ಳಬಾರದೆಂದು ಹೇಳುತ್ತಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಏನಿದೆ? ಇಲ್ಲಿ ಈಗ ಬಹಳ ಮುಖ್ಯವಾಗಿ ಇರತಕ್ಕಂಥಾದ್ದಂದರೆ, ಈ ರಾಜ್ಯದ ಐದೂಕಾಲು ಕೋಟಿ ಜನರಿಗೆ ಸಿಗಬೇಕಾದಂಥ ಸವಲತ್ತು ಮಧ್ಯವರ್ತಿಗಳ ಪಾಲಾಗುತ್ತಿರುವಂಥ ಈ ಸಂದರ್ಭದಲ್ಲಿ ತಾವು, ಯಡಿಯೂರಪ್ಪನವರೇ, ಪ್ರತಿಪಕ್ಷದ ನಾಯಕರಾದ ತಾವು ಮತ್ತು ಅ ಕಡೆ ಕುಳಿತಿರುವಂಥ ಸದಸ್ಯರುಗಳು ಇದರ ಬಗ್ಗೆ ಏನೇನು ವಿಷಯಗಳಿವೆ, ಅವುಗಳನ್ನು ಸರ್ಕಾರದ ಗಮನಕ್ಕೆ ತನ್ನಿ, ಒಂದೊಂದು ದಿನ ತಡವಾದರೂ ಸಹ ಲೂಟಿಗೆ ಅವಕಾಶವಾಗುತ್ತದೆ, ಸರ್ಕಾರದವರಾದ ನಾವು ಅದಕ್ಕೆ ಸ್ಪಂದಿಸುವುದಕ್ಕೆ ಸಿದ್ಧರಿದ್ದೇವೆ ಎಂದು ಹೇಳಬೇಕಾದಂಥವರು ತಾವು. ನಿಮಗೆ ಕನ್ವಿನ್ಸ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ, ತಾವು ದಯಮಾಡಿ ಇದನ್ನು ನಿಯಮ 60ರ ಮೂಲಕವೇ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ, ಮೂಲ ಸೌಕರ್ಯ ಅಭಿವೃದ್ಧಿ, ನಾಗರೀಕ ವಿಮಾನಯಾನ ಮತ್ತು ಬೆಂಗಳೂರು ಅಂತ ರಾಷ್ಟ್ರೀಯ ವಿಮಾಣ ನಿಲ್ದಾಣ ಸಚಿವರು):– ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಯಾರನ್ನೋ ಡಿಫೆಂಡ್ ಮಾಡಿಕೊಳ್ಳಬೇಕು ಅಥವಾ ಕೇಂದ್ರ ಸರ್ಕಾರದಿಂದ ಬಂದಂಥ ಅಕ್ಕಿ, ಗೋಧಿ ಕಳ್ಳಸಾಗಾಣಿಕೆಯ ಮೂಲಕ ವಿದೇಶಕ್ಕೆ ಹೋಗುತ್ತಿತ್ತೋ ಅಥವಾ ಅದು ಬೇರೆ ಕಡೆ ಮಾರಾಟವಾಗುತ್ತಿತ್ತೋ ಎನ್ನುವುದನ್ನು ಮುಚ್ಚಿಕೊಳ್ಳಬೇಕು ಎನ್ನುವ ಪ್ರಶ್ನೆ ಸರ್ಕಾರದ ಮುಂದೆ ಇಲ್ಲ. ಅವರು ಯಾರೇ ಆಗಲಿ, ಎಷ್ಟೇ ದೊಡ್ಡವರಾಗಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಪತ್ರಿಕೆಗಳಲ್ಲಿ ಹೇಳಿರತಕ್ಕಂಥಾದ್ದು ವಿರೋಧ ಪಕ್ಷದ ನಾಯಕರಾದ ತಾವು ಮತ್ತು ಇತರ ನಾಯಕರುಗಳು ನೋಡಿರಬಹುದು. (ವಾಟಾಳ್ ನಾಗರಜ್‌ರವನ್ನುದ್ದೇಶಿಸಿ) ನಾಯಕರೇ, ನೀವು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:– ನೀವು ಯಾರು? ಎಲ್ಲಿದ್ದಿರಿ? ಯಾವ ಕಡೆಗೆ ಹೋದಿರಿ? ಯಾರನ್ನು ಸಮರ್ಥಿಸುತ್ತಿದ್ದೀರಿ? ಈಗ ನೀವು ಎಲ್ಲಿದ್ದೀರಿ? ನೀವು ಹಿಂದಿನ ಅದೇ ಸಿಂಧ್ಯಾ ರವರವಲ್ಲವೇ? ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಹಳೆಯ ಸಿಂಧ್ಯಾರವರೇ? ಪ್ರಕಾಶ್‌ರವರು ಹಳೆಯ ಪ್ರಕಾಶ್‌ರವರೇ? ಇವರು ಯಾರು? ಏನು ಎನ್ನುವ ಬಗ್ಗೆ ನನಗೆ ಕಣ್ಣೇ ಕಾಣುತ್ತಿಲ್ಲ. ಅದಕ್ಕಾಗಿ ಸ್ವಲ್ಪ ನಿಂತಿದ್ದೇನೆ. ಇವರು ಅದೇ ಸಿಂಧ್ಯಾರವರೇ? ಅದೇ ಪ್ರಕಾಶ್‌ರವರೇ ಎಂದು ನೋಡಲು ನಿಂತಿದ್ದೇನೆ. ಕಾಂಗ್ರೆಸ್ ಸರ್ಕಾರದ ಅನ್ಯಾಯವನ್ನು ಸಮರ್ಥಿಸತಕ್ಕಂಥ ಇಬ್ಬರು ಮುಖಂಡರುಗಳನ್ನು ನೋಡಿ ನನಗೆ ವ್ಯಥೆಯಾಗುತ್ತಿದೆ. ಇಂಥ ದುರಂತ ಇವರಿಗೆ ಎಂದೆಂದೂ ಬರಬಾರದು? ಏನು ಪಾಪದ ಕೆಲಸ ಮಾಡಿದ್ದರೋ? ಯಾವ ಜನ್ಮದಲ್ಲಿ ಏನು ಮಾಡಿದ್ದರೋ? ಏನು ಪರಿಸ್ಥಿತಿಗೆ ಬಂದುಬಿಟ್ಟಿರಿ ನೀವು.

ಅಧ್ಯಕ್ಷರು:– ನೀವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಆಯಿತು, ನಿಮಗೆ ನಮ್ಮ ಬಗ್ಗೆ ಇರತಕ್ಕಂಥ ಅನುಕಂಪ, ಕಾಳಜಿ ಇವುಗಳ ಬಗ್ಗೆ ನಾನು ತುಂಬಾ ಚಿರರುಣಿಯಾಗಿದ್ದೇನೆ. ಪ್ರಕಾಶ್‌ರವರು, ಸಿದ್ಧರಾಮಯ್ಯನವರು, ಸಿಂಧ್ಯಾರವರು ಎಲ್ಲಿದ್ದರೂ ಒಂದೇ. ಅವರು ಎಲ್ಲಿದ್ದರೂ ಬದಲಾವಣೆಯಾಗುವುದಿಲ್ಲ. ತಾವು ನಿಂತುಕೊಂಡು ಕೇಳುವುದರ ಬದಲಾಗಿ ಕುಳಿತುಕೊಂಡು ಕೇಳಿ ಎಂದು ಹೇಳಿದೆ ಅಷ್ಟೇ.

ಶ್ರೀ ವಾಟಾಳ್ ನಾಗರಾಜ್:– ಅವರ ಬಣ್ಣ ಬದಲಾಗಿದೆ.

ಅಧ್ಯಕ್ಷರು:– ದಯಮಾಡಿ ಈಗ ವಾದ ಬೇಡ. ಅವರು ಮುಗಿಸಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಆಯಿತು ಸ್ವಾಮಿ, ಬಹಳಷ್ಟು ಜನರ ಬದಲಾವಣೆಯಾಗಿದೆ. ಏನು ಮಾಡುವುದಕ್ಕಾಗುತ್ತದೆ, ಬಿಡಿ. ವಾಟಾಳ್ ನಾಗರಾಜ್‌ರವರು....

ಶ್ರೀ ವಾಟಾಳ್ ನಾಗರಾಜ್:– ನಾನು ಈ ಸದನದಲ್ಲಿ ಸವಾಲು ಹಾಕುತ್ತಿದ್ದೇನೆ. ಯಾರ್‍ಯಾರು ಬಣ್ಣ ಏನೇನಾಗಿದೆ ಎಂದು ದಯಮಾಡಿ ಈ ಸದನದ ಮುಂದೆ ಇಡಿ.

ಅಧ್ಯಕ್ಷರು:– ಮಾನ್ಯ ಸದಸ್ಯರುಗಳಲ್ಲಿ ನನ್ನ ಮನವಿ ಏನೆಂದರೆ, ಪರಸ್ಪರ ವೈಯಕ್ತಿಕ ವಿಚಾರಗಳನ್ನು ದಯಮಾಡಿ ಇಲ್ಲಿ ಪ್ರಸ್ತಾಪ ಮಾಡಬಾರದು. ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ವಾದವನ್ನು ಮಂಡನೆ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂಥಾದ್ದು ಇಷ್ಟೇ, ಹಿರಿಯ ಸದಸ್ಯರು ಮತ್ತು ಮಾಜಿ ಅಧ್ಯಕ್ಷರಾದಂಥ ರಮೇಶ್ ಕುಮಾರ್‌ರವರು ಪಾಯಿಂಟ್ ಆಫ್ ಆರ್ಡರನ್ನು ರೇಸ್ ಮಾಡಿರತಕ್ಕಂಥಾದ್ದರಲ್ಲಿ ತಿರುಳಿದೆ. ಮಾನ್ಯ ಯಡಿಯೂರಪ್ಪನವರು ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವ ಬಗ್ಗೆ ಪ್ರಿಲಿಮಿನರಿ ಸಬ್ಮಿಷನ್ ಮಾಡಿ ನಿಲ್ಲಿಸಿದ್ದಾರೆ. ಅವರು ಅದನ್ನು ಮುಗಿಸಿದ್ದಾರೆ. ಇನ್ನೂ ಕೆಲವು ಗೌರವಾನ್ವಿತ ಹಿರಿಯ ಸದಸ್ಯರು ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಿದ್ದರೆ ಮಾಡಲಿ. ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನೆಂದರೆ, ಸಭಾನಾಯಕರಾದ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಹೇಳಿದ್ದಾರೆ, ಯಾವುದೇ ಕಾರಣಕ್ಕೂ, ಯಾರನ್ನೂ ಮುಚ್ಚಿಡತಕ್ಕಂಥ ಪ್ರಶ್ನೆ ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ:– ಸಬ್ಮಿಷನ್ ಮಾಡುವುದಕ್ಕೆ ಮೊದಲೇ ಅವರು ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ. ಅವರು ಹೇಳುತ್ತಿದ್ದಾರೆ, ಅದನ್ನು ಕೇಳಿ.

ಶ್ರೀ ಆರಗ ಜ್ಞಾನೇಂದ್ರ:– ಅವರು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಉತ್ತರ ಕೊಡುತ್ತಿಲ್ಲ.

ಶ್ರೀ ಆರಗ ಜ್ಞಾನೇಂದ್ರ:– ವಿರೋಧ ಪಕ್ಷದ ನಾಯಕರು ಇನ್ನೂ ತಮ್ಮ ಅರ್ಗ್ಯೂಮೆಂಟನ್ನು ಮುಗಿಸಿಲ್ಲ. ಆಗಲೇ ಸರ್ಕಾರದ ಪರವಾಗಿ ಉತ್ತರ ಕೊಡಲು ಶುರು ಮಾಡಿದ್ದಾರೆ. ಅವರಿಗೆ ನೀವು ಹೇಳಬೇಕಲ್ಲವೇ?

ಅಧ್ಯಕ್ಷರು:– ಎಲ್ಲರಿಗೂ ಅವಕಾಶ ಕೊಡುತ್ತೇನೆ. ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೇ, ನಾನು ಉತ್ತರ ಕೊಡುತ್ತಿಲ್ಲ. ಉತ್ತರವನ್ನು ಸಂಬಂಧಪಟ್ಟಂಥ ಸಚಿವರು ಕೊಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ:- ಪ್ರಸ್ತಾವಕ್ಕೆ ನಾವೆಲ್ಲಾ ಸಿಗ್ನೇಟರೀಸ್‌ಗಳಾಗಿದ್ದೇವೆ. ನಾವು ಮಾತನಾಡುವ ಮೊದಲೇ ಉತ್ತರ ಕೊಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಪಾಯಿಂಟ್ ಆಫ್ ಆರ್ಡರ್ ಏನಾದರೂ ಇದ್ದರೆ, ಅದಕ್ಕೆ ಸೀಮಿತವಾಗಿ ತಾವು ಅವಕಾಶ ಮಾಡಿಕೊಡಿ, ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಪಾಯಿಂಟ್ ಆಫ್ ಆರ್ಡರನ್ನು ದೃಢೀಕರಣ ಮಾಡಿ ಮಾತನಾಡುತ್ತಿರತಕ್ಕಂಥಾದ್ದು. ಅವರು ತಮ್ಮ ವಿಚಾರವನ್ನು ಪ್ರಸ್ತಾಪ ಮಾಡುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ:- ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಮೊದಲು, ನಾವೆಲ್ಲರೂ ಪ್ರಿಲಿಮಿನರಿ ಸಬ್ಮಿಷನ್ ಮಾಡುವವರೆಗೂ ಸಚಿವರು ದಯಮಾಡಿ ಕುಳಿತರೆ ಒಳ್ಳೆಯದಾಗಬಹುದು.

ಅಧ್ಯಕ್ಷರು:- ಆಯಿತು, ವಿರೋಧ ಪಕ್ಷದ ನಾಯಕರೇ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಗೌರವಾನ್ವಿತ ನಾಯಕರು ಮತ್ತು ಇತರ ಸದಸ್ಯರುಗಳು ವಿಚಾರವನ್ನು ಪ್ರಸ್ತಾಪ ಮಾಡುವುದರ ಬಗ್ಗೆ ಯಾರದೂ ತಕರಾರಿಲ್ಲ. ಯಾರನ್ನೋ ಬಚ್ಚಿಟ್ಟಿಕೊಳ್ಳಬೇಕು, ಯಾರಿಗೋ ರಕ್ಷಣೆ ಕೊಡಬೇಕು ಎನ್ನುವ ಉದ್ದೇಶವನ್ನೂ ಸರ್ಕಾರ ಇಟ್ಟುಕೊಂಡಿಲ್ಲ. ನಾನು ಏಕೆ ಎದ್ದುನಿಂತು ಹೇಳಿದೆ ಎಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದುನಿಂತು, ನೀವು ಯಾರನ್ನೋ ರಕ್ಷಣೆ ಮಾಡಲು ಹೊರಟಿದ್ದೀರಿ ಎಂದು ಹೇಳಿದರು. ಇಲ್ಲಿ ರಕ್ಷಣೆಯ ಪ್ರಶ್ನೆಯೇ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ:- ಅವರು ಇನ್ನೂ ತಮ್ಮ ಮಾತನ್ನು ಮುಗಿಸಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನೂ ಸಹ ಇನ್ನೂ ಮುಗಿಸಿಲ್ಲವಲ್ಲಾ, ನೀವು ಏಕೆ ಹೀಗೆ ಎದರಾಡುತ್ತೀರಿ. ಅಧ್ಯಕ್ಷರೇ ಏನಿದು?

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು:- ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರ ಅಭಿಪ್ರಾಯವನ್ನು ಕೇಳಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ಎಲ್ಲರೂ ಒಂದೇ ಸಲ ಮಾತನಾಡಲು ಆರಂಭ ಮಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲಿ ಪೂರ್ಣ ಪ್ರಮಾಣದ ಪ್ರಸ್ತಾವ ಆಗುವವರೆಗೆ ಅವರು ಉತ್ತರ ಕೊಡುವುದು ಬೇಡ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಸಿಂಧ್ಯಾರವರು ಆರು ತಿಂಗಳ ಹಿಂದೆ ಇಲ್ಲಿ ನಿಂತು ಏನೇನು ಮಾತನಾಡಿದ್ದಾರೆ, ಏನೇನು ಹೇಳಿದ್ದಾರೆ ಎನ್ನುವುದನ್ನು ಈಗ ನಾವು ಹೇಳಬೇಕಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಎಲ್ಲವನ್ನೂ ಹೇಳಿಯಪ್ಪಾ.

ಅಧ್ಯಕ್ಷರು:- ಅವರು ಮಾತನಾಡುತ್ತಿದ್ದಾರೆ, ದಯಮಾಡಿ ಸದಸ್ಯರುಗಳು ಕುಳಿತುಕೊಳ್ಳಬೇಕು.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು:- ಇನ್ನೂ ಸಬ್ಮಿಷನ್ ಮಾಡಿಲ್ಲ, ಆಗಲೇ ಉತ್ತರ ಕೊಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಉತ್ತರವನ್ನು ಕೊಡುತ್ತಿಲ್ಲ. ಉತ್ತರ ಕೊಡತಕ್ಕಂಥಾದ್ದು...

ಶ್ರೀ ಆರಗ ಜ್ಞಾನೇಂದ್ರ:– ನೋಡಿ, ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು:– ಮಾನ್ಯ ಜ್ಞಾನೇಂದ್ರರವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಹೇಗೆ ಮಾತನಾಡಬೇಕು ಎನ್ನುವ ಬಗ್ಗೆ ಮಾನ್ಯ ಗೌರವಾನ್ವಿತ ಸದಸ್ಯರಿಂದ ನಾನು ಪಾಠ ಕಲಿಯುವ ಅವಶ್ಯಕತೆ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ:– ನಾವು ಪಾಠ ಕಲಿಸಲು ಬಂದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರತಕ್ಕಂಥ ಒಂದು ಅಂಶಕ್ಕೆ ಮಾತ್ರ ಸೀಮಿತವಾಗಿ ನಾನು ಮಾತನಾಡುತ್ತಿದ್ದೇನೆ. ಇದರ ಬಗ್ಗೆ ಚರ್ಚೆಯಾಗಬೇಕು. ಈ ಸದನದಲ್ಲೇ ಚರ್ಚೆಯಾಗಬೇಕು. ಅದರ ಬಗ್ಗೆ ನಾನು ತಕರಾರು ಎತ್ತುತ್ತಿಲ್ಲ. ನಾನು ಹೇಳುತ್ತಿರತಕ್ಕಂಥಾದ್ದು ಏನೆಂದರೆ, ಮಾನ್ಯ ರಮೇಶ್ ಕುಮಾರ್‌ರವರು ಒಂದು ರಿಲೆವೆಮಟ್ ಪಾಯಿಂಟ್ ಅಫ್ ಆರ್ಡರನ್ನು ರೇಸ್ ಮಾಡಿದ್ದಾರೆ. ಆದರ ಬಗ್ಗೆ ತಾವು ಗಮನಿಸಬೇಕು. ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಯಾವ ಫಾರಂನಲ್ಲಿ ಕೊಡಬೇಕು ಎನ್ನುವುದನ್ನು ನಿಮಗೇ ಬಿಡುತ್ತೇವೆ. ಆದರೆ ನಿಲುವಳಿ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ರಮೇಶ್ ಕುಮಾರ್‌ರವರು ಎತ್ತಿರತಕ್ಕಂಥ ಪಾಯಿಂಟ್ ಆಫ್ ಆರ್ಡರ್‌ಗೆ ನಾವು ನಿಮ್ಮಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಕಾಲಹರಣ ಮಾಡುವುದು ಬೇಡ ಎಂದು ಹೇಳಿದ್ದೇನೆಯೇ ಹೊರತು, ಯಾರನ್ನೂ ಡಿಫೆಂಡ್ ಮಾಡಲು ನಾನು ಇಲ್ಲಿ ನಿಂತಿಲ್ಲ ಎಂದು ನಾನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ಹೇಳಲು ಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಆ ಕ್ರಿಯಾಲೋಪಕ್ಕೆ ಸಂಬಂಧಪಟ್ಟಂತೆ ನಾನು ಸಮರ್ಥನೆಗೆ ನಿಂತಿದ್ದೇನೆ. ಒಂದು ನಿಲುವಳಿ ಸೂಚನೆಯ ವಿಚಾರದಲ್ಲಿ, ಅದು ಅತ್ಯಂತ ಜರೂರಾದದ್ದು, ಮಹತ್ವದ್ದು ಎನ್ನುವ ವಿಚಾರಗಳ ಬಗ್ಗೆ ನಾವ್ಯಾರೂ ಈಗ ಹೋಗುವುದಿಲ್ಲ. ಆ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದಾಗ ಆ ಸಂದರ್ಭದಲ್ಲಿ ಅದನ್ನು ಹೇಳುತ್ತೇವೆ. ಆದರೆ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುವ ಈ ಅವಧಿಯಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬರಲು ಸಾಧ್ಯವಿಲ್ಲ ಎನ್ನುವ ಮಾತನ್ನು ಶಕ್ದರ್ ಅಂಡ್ ಕೌಲ್‌ನಲ್ಲಿ ಹೇಳಿರುವುದರಿಂದ ಹಾಗೂ ಈ ವಿಚಾರದಲ್ಲಿ ನಿಯಮಾವಳಿಗಳು ಸರಿಯಾದ ರೀತಿಯಲ್ಲಿ ಇರುವ ಕಾರಣದಿಂದ it should be dismissed in-limine. ಆದ್ದರಿಂದ ಈ ಸಂದರ್ಭದಲ್ಲಿ ತಮ್ಮ ಅವಗಾಹನೆ ಮಾಡಿಕೊಡತಕ್ಕಂಥಾದ್ದೇನೆಂದರೆ, ಇದು ಬಹಳ ಮಹತ್ವವಾಗಿರತಕ್ಕಂಥ ಸಂಗತಿಯಾಗಿರುವುದರಿಂದ ಮತ್ತೊಂದು ರೂಪದಲ್ಲಿ ಅದನ್ನು ಚರ್ಚೆಗೆ ತೆಗೆದುಕೊಳ್ಳಿ. ನಾವು ಯಾರನ್ನೂ ಕೂಡ ರಕ್ಷಣೆ ಮಾಡಲು ಹೊರಟಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ನಾವು ಆ ಕಡೆ ಕುಳಿತಿರಲಿ, ಈ ಕಡೆ ಕುಳಿತಿರಲಿ, ಸಾರ್ವಜನಿಕ ಜೀವನದಲ್ಲಿ ನಾವು ಹೇಳಿದ ಮಾತಿಗೆ ಬದ್ಧರಾಗಿರಲೇಬೇಕಾಗುತ್ತದೆ. ಆ ಕಾರಣಕ್ಕಾಗಿ, ನಾವು ಯಾರೂ ಕೂಡ ಚರ್ಚೆಗೆ ಬೆನ್ನು ತೋರಿಸುವವರಲ್ಲ. ಇದರ ಬಗ್ಗೆ ಚರ್ಚೆಯಾಗಲಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಆದರೆ ನಾವೇ ರಚಿಸಿಕೊಂಡಿರತಕ್ಕಂಥ ನಿಯಮಾವಳಿಗಳಿಗೆ ಅನುಗುಣವಾಗಿ ಈ ಸಭೆಯ ಕಲಾಪಗಳು ನಡೆಯಬೇಕು ಎನ್ನುವುದೊಂದೇ ನಮ್ಮ ಕಾಳಜಿಯೇ ವಿನಃ ಇದರಲ್ಲಿ ಮತ್ತೊಂದಿಲ್ಲ. ಈ

ಸಂದರ್ಭದಲ್ಲಿ ಮಾನ್ಯ ರಮೇಶ್‌ಕುಮಾರ್ ರವರು ಕ್ರಿಯಾಲೋಪವನ್ನು ಹೇಳಿದ್ದಾರೆ. ಅದರ ಬಗ್ಗೆ ಈಗ ತಾವು ತಮ್ಮದೇ ಆದಂಥ ತೀರ್ಮಾನವನ್ನು ಕೊಡಬೇಕಾಗುತ್ತದೆ. ಅದಕ್ಕೆ ಪೂರಕವಾಗಿ ನಾನು ಈ ಮಾತನ್ನು ಹೇಳುತ್ತೇನೆ. ಅದಕ್ಕೆ ಪೂರಕವಾಗಿ ಶಕ್ದರ್ ಅಂಡ್ ಕೌಲ್ ವಿಚಾರದಲ್ಲಿ ನಾನು ಈ ಮಾತನ್ನು ಹೇಳುತ್ತೇನೆ. ನಾವು ವಂದನಾನಿರ್ಣಯವನ್ನು ಸಲ್ಲಿಸಿರತಕ್ಕಂಥ ಈ ಅಧಿವೇಶನದಲ್ಲಿ ಈ ಕ್ರಿಯಾಲೋಪದ ವಿಚಾರದ ಬಗ್ಗೆ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಬರುವುದಿಲ್ಲ ಎನ್ನುವಂಥ ಕಾರಣ ಇರುವುದರಿಂದ ಅದನ್ನು ತಾವು ತಿರಸ್ಕಾರ ಮಾಡಿ ಮತ್ತೆ ಬೇರೊಂದು ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎನ್ನುವುದು ಒಂದೇ ನಮ್ಮ ಈ ಒಂದು ಪಾಯಿಂಟ್. ಆ ಕಾರಣಕ್ಕಾಗಿಯೇ ತಾವು ತೀರ್ಮಾನವನ್ನು ಕೊಟ್ಟ ನಂತರ ಈ ಒಂದು ವಿಚಾರ ಬರಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಅಧ್ಯಕ್ಷರೆ, ಅದೇ ಶಕ್ದರ್ ಅಂಡ್ ಕೌಲ್ ಪುಸ್ತಕದ ಪುಟ 451ನ್ನು ನಾನೂ ಕೂಡ ಕೋಟ್ ಮಾಡುತ್ತೇನೆ. Food policy ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಿಲುವಳಿ ಸೂಚನೆ ತಂದಿಲ್ಲ. ಶ್ರೀ ರಮೇಶ್ ಕುಮಾರ್‌ರವರು ಪ್ರಸ್ತಾಪಿಸಿದ ಕ್ರಿಯಾಲೋಪವೇ ಬೇರೆ, ಅದಕ್ಕೆ ಸಪೋರ್ಟ್ ಮಾಡಿ ತಾವು ಮಾತನಾಡಿದ ಕ್ರಿಯಾಲೋಪವೇ ಬೇರೆ. ಸನ್ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪಿಸಿದ್ದು ನೀವು preliminary briefings ಕೊಟ್ಟು ಕುಳಿತುಕೊಳ್ಳಬೇಕು, ಅಲೋ ಮಾಡುವುದು ಬಿಡುವುದು ಅಧ್ಯಕ್ಷರ ಪೀಠಕ್ಕೆ ಬಿಟ್ಟಿದ್ದು, detail ಚರ್ಚೆ ಮಾಡುವುದಕ್ಕೆ ಅವರು ತಕರಾರು ಮಾಡಿದ್ದಾರೆ, I endorse it. ಆದರೆ parliamentary proceedingsನಲ್ಲಿ ಅಥವಾ Practices and Procedure of Parliament ನಲ್ಲಿ Food Policy ಮೇಲೆ, Governor's Address ಮೇಲೆ ಅಥವಾ President's Adress ಮೇಲೆ debate ಇದ್ದಾಗ ಇಂಥ motions ಅನ್ನು move ಮಾಡಬಾರದೆಂದು ಹೇಳಿದಿರಿ. ನಾವು ಇಲ್ಲಿ ಕೇಳುತ್ತಿರುವುದರಲ್ಲಿ ಬೇಕಾದಷ್ಟು ಅಂಶ ಅಡಕವಾಗಿದೆ. ಅಲ್ಲಿ ಕೂಲಿ ಮಾಡಿದ್ದಾರೆಯೇ, ಕೆಲಸ ನಡೆದಿದೆಯೇ, ಕಾಳು ಕೊಟ್ಟಿದ್ದಾರೆಯೇ, ಹಾಗಾದರೆ ಅದು ಏನಾಯಿತು? ಕೆಲಸವೇ ನಡೆಯಲಿಲ್ಲವೇ? This is not the policy of the Karnataka Government. 67 ಪರ್ಸೆಂಟ್ ಅಕ್ಕಿ ಕೊಡಬೇಕೆಂದು ನಿಗದಿಯಾದ ಅಕ್ಕಿ ಎಲ್ಲೋ ಮಾರಾಟ ಆಗಿದೆಯೆಂದರೆ ಅದಕ್ಕೆ ನಾವು ಬರೆದುಕೊಂಡು ಬಂದು ಬಿಟ್ಟಿದ್ದೇವೆ ರೋಲ್ ಅನ್ನು, ಇಷ್ಟಿಷ್ಟು ಜನರಿಗೆ ಕೊಟ್ಟಿದ್ದೇವೆ, ಇಷ್ಟಿಷ್ಟು ಜನರಿಗೆ ವಿತರಣೆ ಆಗಿದೆ ಎಂದು ಹೇಳಿದ್ದೇವೆ, ಇಷ್ಟು ಕೆಲಸ ಆಗಿದೆ, 11 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಬಳಸಿದ್ದೇವೆಂದು ಸರ್ಕಾರ utilization certificate ಅನ್ನು ಕೊಟ್ಟಿದೆ. ಸರ್ಕಾರದ ಅತ್ಯಂತ ಗಂಡಾಂತರಕಾರಿಯಾದಂಥ utilization certificate ಕೇಂದ್ರ ಸರ್ಕಾರದಲ್ಲಿ ಇರುವಾಗ ನಾವು ಪ್ರಶ್ನೆ ಕೇಳಿರುವುದು relevant ಆಗಿದೆ. This is in no connection with the food policy of the Karnataka State Government. ತಾವೇನು ಶಕ್ದರ್ ಬುಕ್ ಅನ್ನು ಕೋಟ್ ಮಾಡಿ ಹೇಳುತ್ತಿದ್ದೀರಿ, food policy ಬಗ್ಗೆ ಇಲ್ಲಿ ನಾವು ಚರ್ಚೆ ಮಾಡುತ್ತಿಲ್ಲ. ಇಲ್ಲಿ ನಡೆದಿರುವ ಒಂದು ಅವ್ಯವಹಾರದ ಬಗ್ಗೆ ನಿಮ್ಮದೇನೂ ಪಾಲಿಸಿ ಇದು ಅಲ್ಲ. I request you to allow this motion.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ–ಗ್ರಾಮಾಂತರ):– ಮಾನ್ಯ ಅಧ್ಯಕ್ಷರೆ, ಶ್ರೀ ರಮೇಶ್ ಕುಮಾರ್‌ರವರು ಪ್ರಸ್ತಾಪಿಸಿದಂಥ ಬಗ್ಗೆ ಮತ್ತು ಮಾನ್ಯ ಪ್ರಕಾಶ್‌ರವರು ಪ್ರಸ್ತಾಪಿಸಿದಂಥ point of Order ಬಗ್ಗೆ ಮತ್ತು ಮಾನ್ಯ ಪ್ರಕಾಶ್‌ರವರು ಪ್ರಸ್ತಾಪಿಸಿದಂಥ point of Order ಇವೆರಡೂ different subject ಇದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಈ ಒಂದು ಅಕ್ಕಿ ಹಗರಣದ ಬಗ್ಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. 50 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇದರಲ್ಲಿ ಭ್ರಷ್ಟಾಚಾರ ನಡೆದಂಥದ್ದು, ಅವ್ಯವಹಾರ ನಡೆದಂಥದ್ದು ಈ ಹಗರಣದ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಅವರು preliminary submission ಮಾಡುತ್ತಿದ್ದಾರೆ. ಇನ್ನೂ ಕೂಡ ಅವರು preliminary submission ಮಾಡಿ ಮುಗಿದಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರು ಇಲ್ಲಿ ಹಿಂದೆ ಸಭಾಧ್ಯಕ್ಷರಾಗಿ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಅದರ ಬಗ್ಗೆ ಎರಡು ಮಾತಿಲ್ಲ. ಹಿಂದೆ ಮಾನ್ಯ ರಮೇಶ್‌ಕುಮಾರ್‌ರವರು ಇಲ್ಲಿ ಸಭಾಧ್ಯಕ್ಷರಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಈ ರೀತಿಯಾದಂಥ ನಿಲುವಳಿ ಸೂಚನೆಗಳು ಬಂದಂಥ ಸಂದರ್ಭದಲ್ಲಿ even preliminary submission ಬೇಕಾದರೆ ಉದಾಹರಣೆಗಳು ಸಹ ಸಾಕಷ್ಟು ಇವೆ. preliminary submissionಗೆ ಒಂದೊಂದು ದಿವಸ ಒಂದೊಂದು ತಾಸು ಎರಡು ತಾಸು, ಸಾಯಂಕಾಲದ ವರೆಗೆ ನಡೆದಿದೆ. ಈ ಕಾವೇರಿ ನದಿ ನೀರು ವಿಚಾರ ಬಂದಂಥ ಸಂದರ್ಭದಲ್ಲಿ, ಕೃಷ್ಣಾ ಕಣಿವೆ ವಿಚಾರ ಬಂದಂಥ ಸಂದರ್ಭದಲ್ಲಿ, ಈ ರೀತಿ ಸಾರ್ವಜನಿಕ ಮಹತ್ವದ ವಿಚಾರ ಬಂದಂಥ ಸಂದರ್ಭದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಅವರು ಸಭಾಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ preliminary submission ಮಾಡಲಿಕ್ಕೆ ಸಾಕಷ್ಟು ಸಮಯಾವಕಾಶವನ್ನು ಕೊಟ್ಟಿರುವಂಥ ಸಂಪ್ರದಾಯ ಇವತ್ತು ಇಲ್ಲಿ ಈ ಸದನದ ಮುಂದೆ ಇದೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ ಸಹ 5–10 ನಿಮಿಷ ಕೂಡ ಮಾತನಾಡಿಲ್ಲ. ಹೀಗಾಗಿ ಇಂಥ ಸಂದರ್ಭದಲ್ಲಿ preliminary submission ಮಾಡಬೇಕೆನ್ನುವಂಥದ್ದಕ್ಕೆ ಇವತ್ತು ಏನು ಅವರು ಮಾಡಿದ್ದಾರೆ ಅದರ ಬಗ್ಗೆ ತಕರಾರು ಏನೂ ಇಲ್ಲ. ಇವತ್ತು ಮಾಡುವಂಥದ್ದರ ಬಗ್ಗೆ ತಾವು ಒಪ್ಪಿಗೆ ಕೊಟ್ಟ ನಂತರ detail ಆಗಿ discussion ಆಗಬೇಕು. ಆದರೆ preliminary submission ಮಾಡಿ ತಮಗೆ convince ಮಾಡುವಂಥ ಆ ಹಂತದಲ್ಲಿ ಇರುವಂಥ ಸಂದರ್ಭದಲ್ಲಿ ಈ ರೀತಿ point of Order raise ಮಾಡುವಂಥದ್ದು ಸಾಧು ಅಲ್ಲ ಎಂದು ನಾನು ಹೇಳಬಯಸುತ್ತೇನೆ. ಇನ್ನು ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತಿರುವುದೇನೆಂದರೆ, ನಾವು ಯಾರನ್ನೂ ರಕ್ಷಣೆ ಮಾಡುವಂಥದ್ದು ಇಲ್ಲ, ಎಂಥ ದೊಡ್ಡ ವ್ಯಕ್ತಿಗಳು ಇರಬಹುದು ಅವರನ್ನು ನಾವು ರಕ್ಷಣೆ ಮಾಡುವಂಥದ್ದು ಇಲ್ಲ ಎನ್ನುವಂಥದ್ದನ್ನು ಸ್ಪಷ್ಟವಾಗಿ ಇವತ್ತು ತಾವು ಹೇಳುತ್ತಿದ್ದೀರಿ, ಮಾನ್ಯ ಸಿಂಧ್ಯಾರವರು ಹೇಳಿದರು, ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ. ಹಾಗಾದರೆ ಈ ಒಂದು ವಿಷಯವನ್ನು ಚರ್ಚೆ ಮಾಡಲಿಕ್ಕೆ ಏಕೆ ಹಿಂದೇಟು ಹಾಕುತ್ತಿದ್ದೀರಿ? ಹಿಂದೆ ಸಂಪ್ರದಾಯವೇ ಇದೆ. ಹಿಂದೆ ಎಷ್ಟೋ ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳೇ ಸ್ವತಃ ಎದ್ದು ನಿಂತು ಇವತ್ತು ಏನು ನಿಲುವಳಿ ಸೂಚನೆ ತೆಗೆದುಕೊಂಡು ಬಂದಿದ್ದಾರೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ ಎನ್ನುವುದು ಅವರ ಕಡೆಯಿಂದ ಸಾಕಷ್ಟು ಸಲ ಬಂದಿದೆ. ಈಗ ಮುಖ್ಯಮಂತ್ರಿಗಳು ಎದ್ದು ನಿಂತು ಹೇಳಬಹುದಾಗಿತ್ತು. ಇದರ ಬಗ್ಗೆ ಚರ್ಚೆ ಮಾಡುವ ಬಗ್ಗೆ preliminary

submission ಬೇಕೋ ಬೇಡವೋ ಇದರ ಬಗ್ಗೆ ಚರ್ಚೆ ಮಾಡುವಂಥದ್ದಕ್ಕೆ ಅವಕಾಶ ಕೊಡಲಾರದೆ, ಇಲ್ಲ, ಈ ಚರ್ಚೆಗೆ ನಾವು ತಯಾರಿದ್ದೇವೆ, ಈಗಲೇ ಚರ್ಚೆ ಪ್ರಾರಂಭ ಮಾಡಿ ಎನ್ನುವಂಥದ್ದನ್ನು ಹೇಳಬಹುದಾಗಿತ್ತು. ಏಕೆಂದರೆ ಇಲ್ಲಿ ನೂರಾರು ಕೋಟಿ ರೂಪಾಯಿಗಳ ಅಕ್ಕಿ ಹಗರಣ ಇದೆ. ಹೀಗಾಗಿ ಇದರಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ಇವತ್ತು point of order ತಂದಿದ್ದಾರೆ. ಅದರಲ್ಲಿ ಯಾವುದೇ ಒಂದು ತಿರುಳು ಇಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ, ದಯವಿಟ್ಟು ತಾವು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ ಅದಕ್ಕೆ ತಾವು ಅನುಮತಿ ಕೊಟ್ಟು ಅವರು ಮುಂದುವರಿಸಬೇಕು, ಮತ್ತು ಸರ್ಕಾರ ಸಹ ಇದಕ್ಕೆ ಸಹಕರಿಸಿ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):– ಮಾನ್ಯ ಅಧ್ಯಕ್ಷರೆ, ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳಿದ ಮಾತನ್ನು ನಾನು ಪೂರ್ಣ ಅನುಮೋದನೆ ಮಾಡುತ್ತೇನೆ. ಆದರೆ ಅವರು ವಿಷಯವನ್ನು ಪ್ರಸ್ತಾಪ ಮಾಡುವಾಗ ಸ್ವಲ್ಪ ಎಲ್ಲೋ ಟ್ರಾಕ್ ತಪ್ಪಿಸಿಕೊಂಡರು. ನಿಯಮ 60 ಏನು ಇದೆ, ಇದು ಎರಡು ಭಾಗ, ಒಂದನೆಯದು ಏನೆಂದರೆ preliminary submission, ಎರಡನೆಯದು, preliminary submission ಆಗಿ ಅಧ್ಯಕ್ಷ ಪೀಠಕ್ಕೆ ಮನವರಿಗೆ ಆದರೆ ಡಿಸ್ಕಷನ್ ಆಗುತ್ತದೆ. ನಾನು ಏನು ಮಾಡಿದೆ ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪ ಮಾಡುವ ವೇಳೆ ಗೆ ಒಂದು ವ್ಯಾಪ್ತಿ ಇದೆ. ಆ ವ್ಯಾಪ್ತಿಯನ್ನು ಧಾಟಿ ಅವರು ಹೋಗುತ್ತಿದ್ದಾರೆ, ನೇರ ಚರ್ಚೆಗೆ ತೆಗೆದುಕೊಳ್ಳಬೇಕಾದಂಥ ವಸ್ತುವನ್ನು preliminary discussion ಮಾಡುವ ವೇಳೆಗೆ ನಾವು ತೆಗೆದುಕೊಳ್ಳುತ್ತಿದ್ದೇವೆ, ಅದು ಸರಿ ಅಲ್ಲ, ಅಧ್ಯಕ್ಷ ಪೀಠ ಡಿಸ್ಕಷನ್‌ಗೆ ಅವಕಾಶ ಕೊಟ್ಟಿದೆಯೇ ಅಥವಾ ನಾವು ಇನ್ನೂ ಕೂಡ preliminary discussion stage ನಲ್ಲಿ ಇದ್ದೇವೆಯೆ ಎನ್ನುವುದರ ಬಗ್ಗೆ ನಮಗೆ ಸ್ಪಷ್ಟನೆ ಕೊಡಬೇಕು ಎಂದು ನಾನು ಕ್ರಿಯಾಲೋಪವನ್ನು ಪ್ರಸ್ತಾಪಿಸಿರತಕ್ಕಂಥದ್ದು. ನಿಲುವಳಿ ಸೂಚನೆ ಮೇಲೆ preliminary discussion ಮಾಡುವ ವೇಳೆಗೆ ಈ ಸದನದಲ್ಲಿ ಅನೇಕ ವೇಳೆ ದಿವಸಗಳ ಗಟ್ಟಲೆ ಚರ್ಚೆ ಮಾಡಿರತಕ್ಕಂಥದ್ದು ಹೌದು. ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಒಂದು ಕೇಸನ್ನು ನೀವು ಚರ್ಚೆಗೆ ತೆಗೆದುಕೊಳ್ಳುವಾಗ material facts are different and material particulars are different. Material particulars are the matters that come up for discussion. Material facts are those which we submit at the preliminary stage. I would like to know from the Hon.Chair, are we at the stage of discussing this matter confining to preliminary submission Or, has the Chair already given consent and have we to proceed further to take up this matter for discussion? I would like to know as a Member of this House.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಈಗ ಪ್ರಶ್ನೆ ಇಲ್ಲಿ ಇರತಕ್ಕಂಥದ್ದು Adjournment motion ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮೂವ್ ಮಾಡಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಈ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಇದು ಸಾರ್ವಜನಿಕ ಜನರಿಗೆ ಸಂಬಂಧಪಟ್ಟ ಮಹತ್ವದ ವಿಚಾರವಾಗಿದೆ. ನಿಲುವಳಿ ಸೂಚನೆ ಮುಖಾಂತರ ಇವತ್ತು ಪ್ರಸ್ತಾಪ ಮಾಡಿದ್ದು, ಇದು ನಿನ್ನೆ ಆದಂಥ ಘಟನೆ ಅಲ್ಲ ಅಥವಾ ಇವತ್ತು ಮುಂಜಾನೆ ಆದಂಥ ಘಟನೆ ಅಲ್ಲ. ಇದು 13ನೇ ತಾರೀಖು ನಮ್ಮೆಲ್ಲರ ಚುನಾವಣೆಯ ರಿಸಲ್ಟ್ ಬಂದ ಮೇಲೆ 19ನೇ ತಾರೀಖಿನ ದಿವಸ ಈ ಒಂದು ಘಟನೆ ನಡೆದಿರುವುದು ಗೊತ್ತಾಗಿದೆ. ಇವತ್ತು ಏನಾಗುತ್ತಿದೆ ಸದನದಲ್ಲಿ ಪ್ರಪ್ರಥಮವಾಗಿ ಇಂಥ ಮಹತ್ವದ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ತಾವು ಏನು ಹೇಳುತ್ತಿದ್ದೀರಿ, ಸಾರ್ವಜನಿಕರ ಮನಸ್ಸಿನಲ್ಲಿ ಏನಾಗುತ್ತದೆ, ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ ಎನ್ನತಕ್ಕಂಥ ಮಾತಿಲ್ಲ. ಇವತ್ತು ಸರ್ಕಾರದ ಮೇಲೆ ಗುರುತರವಾದಂಥ ಆಪಾದನೆಗಳನ್ನು ಮಾಡುತ್ತಿದ್ದೀರಿ. ಯಾರು ತಪ್ಪಿತಸ್ಥರು ಇದ್ದಾರೆ ಅವರ ವಿರುದ್ಧ ತನಿಖೆ ಮಾಡಬೇಕೆನ್ನತಕ್ಕಂಥದ್ದು, ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಆಸೆ. ಯಾರೇ ದೊಡ್ಡವರು ಆಗಿರಲಿ ಎನ್ನತಕ್ಕಂಥ ಮಾತನ್ನೂ ಕೂಡ ಪ್ರಸ್ತಾಪ ಮಾಡಿದ್ದೀರಿ. ನಾನು ವಿವರಗಳಿಗೆ ಹೋಗುತ್ತಿಲ್ಲ. ಇವತ್ತು ಒಂದೇ ವಿಷಯ ತಮಗೆ ನಾನು ಹೇಳುತ್ತಿದ್ದೇನೆ. ನಿನ್ನೆ ಕೂಡ ತಾವು ಗೋದಾಮಿಗೆ ಭೇಟಿ ಆಗಿದ್ದಿರಿ. ಇವತ್ತು ಇದೆಲ್ಲಾ ಉದಯ ಟಿ.ವಿ.ಯಲ್ಲಿ ಬಂದಿದೆ, ಪತ್ರಿಕೆಯಲ್ಲಿ ಕೂಡ ಬರುತ್ತಿದೆ. ರಾಜ್ಯದ ಮುಖ್ಯಮಂತ್ರಿಯಾಗಿ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತು ನಡೆಯುತ್ತಿರತಕ್ಕಂಥ ವ್ಯವಹಾರದಲ್ಲಿ ನಾವು ಕಣ್ಣುಮುಚ್ಚಿ ಕುಳಿತಿಲ್ಲ. 19ನೇ ತಾರೀಖು ಡೆಪ್ಯುಟಿ ಕಮಿಷನರ್‌ರವರಿಗೆ, ಯಾರೂ ಕೂಡ ವಿರೋಧ ಪಕ್ಷದ ನಾಯಕರು ಯಾರಾದರೂ ಶಾಸಕರಿಂದ ಮಾಹಿತಿ ಹೋಗಿದ್ದಲ್ಲ, ಒಬ್ಬ ಪ್ರಜೆಯಿಂದ ಹೋಯಿತು ಇಂಥ ಒಂದು ಘಟನೆ ನಡೆದಿದೆ ಎಂದು. 23ನೇ ತಾರೀಖು ದಿವಸ ರೈಡ್ ಮಾಡಿದ್ದೇವೆ. ಇಲ್ಲಿಯವರೆಗೆ ದಲ್ಲಿ 7 ಮಂದಿಗೆ ನಾವು ಮಾಡಿದ್ದೇವೆ. ಸಿ.ಓ.ಡಿ.ಗೆ ತನಿಖೆ ಮಾಡಬೇಕೆಂದು ಮುಖ್ಯ ಕಾರ್ಯದರ್ಶಿಯವರಿಂದ ಆದೇಶ ಆದ ಮೇಲೆ ಬಹಳ ತ್ವರಿತಗತಿಯಿಂದ ಪರಿಣಾಮಕಾರಿಯಾಗಿ ಎಂದೆಂದೂ ಆಗಲಾರದಂಥ ರೀತಿಯಲ್ಲಿ ಇವತ್ತು ನಮ್ಮ ಸಿ.ಓ.ಡಿ. ಬಹಳ ಕೆಲಸ ಮಾಡಿದೆ. We have to appreciate ಆದರೆ ಇವತ್ತು ನಾನು ನಿಮಗೆ ಹೇಳುವುದೇನೆಂದರೆ, ಎಷ್ಟೋ ಬಡವರಿಗೆ, ಇದು ಕೂಲಿಗಾಗಿ ಕಾಳು ಕೊಡತಕ್ಕಂಥದ್ದು ಆಗಿರಲಿ, ಬೇರೆ ವಿಚಾರದಲ್ಲಿ ಧಾನ್ಯ ಏನು ಬಂದಿದೆ ರಾಜ್ಯಕ್ಕೆ, ಇದರ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇನ್ನೂ ತೆಗೆದುಕೊಳ್ಳುತ್ತಿದ್ದೇವೆ. ಏನು ಕ್ರಮ ತೆಗೆದುಕೊಳ್ಳಲಾರದೆ ಸರ್ಕಾರ ಕುಳಿತಿದೆ ಎನ್ನತಕ್ಕಂಥ ರೀತಿಯಲ್ಲಿ ತಾವು ಪ್ರಸ್ತಾಪ ಮಾಡಬಹುದು. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ತಾವು ನಿಲುವಳಿ ಸೂಚನೆಯಲ್ಲಿ ಅಲ್ಲ, ರೂಲ್ 69ರಡಿಯಲ್ಲಿ ಪ್ರಸ್ತಾಪ ಮಾಡಿ, ಏನಾದರೂ ಕೂಡ ವಿವರಗಳು ಇದ್ದರೆ ಹೇಳಿ, ಸರ್ಕಾರದ ಕಡೆಯಿಂದ ಕೂಡ ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಯಾರೇ ತಪ್ಪಿತಸ್ಥರು ಇರಲಿ, ಇವತ್ತು ಪ್ರಾಮಾಣಿಕವಾಗಿ ನಮೆಲ್ಲಾ ಶಾಸಕರ ವಿಶ್ವಾಸವನ್ನು ತೆಗೆದುಕೊಂಡು ನಾನು ಹೇಳುತ್ತಿದ್ದೇನೆ, ಎಲ್ಲೂ ಕೂಡ ಹಿಂಜರಿಯುವುದಿಲ್ಲ, ಈಗಾಗಲೇ we have taken action ಮುಂದೆಯೂ ಕೂಡ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನೂ ಸಹ ತಮಗೆ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯಲ್ಲಿ ಚರ್ಚೆ ಆಗಿದೆಯೇ ಅದಕ್ಕೆ ಉತ್ತರ ಅಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಚರ್ಚೆನೂ ಆಗಿಹೋಯಿತು,. ಸರ್ಕಾರದಿಂದ ಉತ್ತರವೂ ಆಗಿ ಹೋಯಿತು.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೊಧ ಪಕ್ಷದ ನಾಯಕರು ಏನೋ ಹೇಳುತ್ತಿದ್ದಾರೆ ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಏನು ಮಾತನಾಡುತ್ತಿದ್ದರು ಅಂದರೆ, ಸರ್ಕಾರ ಏನೂ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ, ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಸಿಓಡಿಯವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ನಾನು ಇಲ್ಲವೆಂದು ಹೇಳುತ್ತಿಲ್ಲ. ಸಿಓಡಿಯವರು ಒಳ್ಳೆಯ ಕೆಲಸವನ್ನು ಮಾಡಿದರೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. 20 ತಂಡಗಳಲ್ಲಿ ತನಿಖಾ ದಳ ಹೋಗಿದೆ, ತನಿಖೆ ಮಾಡುತ್ತಿದ್ದಾರೆ, ನಿತ್ಯ ಇದರ ಸುದ್ದಿ ಬರುತ್ತಿದೆ. ಕೂಲಿಗಾಗಿ ಕಾಳು ಯೋಜನೆಯ ಪಡಿತರ ಒಂದು ವ್ಯವಸ್ಥೆಯಲ್ಲಿ ಡಿಸ್ಟ್ರಿಬ್ಯೂಟ್ ಆಗಬೇಕಾದಂಥ ಗೋಧಿಯ ಕಳ್ಳ ಸಾಗಾಣಿಕೆಯಾಗುತ್ತಿದೆ ಎಂದಾಗ, ಮಾನ್ಯ ಮುಖ್ಯಮಂತ್ರಿಗಳು ಧೈರ್ಯವಾಗಿ ಹೇಳಬೇಕು. ಶ್ರೀ ಯಡಿಯೂರಪ್ಪನವರೆ, ನನ್ನ ಸರ್ಕಾರ ಆಸ್ತಿತ್ವಕ್ಕೆ ಬಂದಮೇಲೆ ಇದು ನಿಂತಿದೆ, ಇವತ್ತಿನವರೆಗೂ ನಡೆದಿರುವಂಥ ಘಟನೆಗಳ ಬಗ್ಗೆ ನಿಮಗೆ ಮಾಹಿತಿಯನ್ನು ಕೊಡುತ್ತೇನೆ. ಅಂದರೆ ಯಾರನ್ನೋ ಸಸ್ಪೆಂಡ್ ಮಾಡಿದಾಕ್ಷಣಕ್ಕೆ, ಯಾರನ್ನೋ ಆರೆಸ್ಟ್ ಮಾಡಿದಾಕ್ಷಣಕ್ಕೆ ವ್ಯವಹಾರ ನಿಂತಿಲ್ಲ, ಅದು ಕುದಿರಿಕೊಂಡು ಮುಂದಕ್ಕೆ ಹೋಗುತ್ತಿದೆ. ಇವತ್ತು ಬೆಳಿಗ್ಗೆ ನಮ್ಮ ಸ್ನೇಹಿತರು ಬಂದರು, ಗೋಣಿಮರ, ಸೂಲಿಕೆರೆ, ಕೆಂಗೇರಿ ಹೋಬಳಿ ಬೆಂಗಳೂರು ಸೌತ್‌ನಲ್ಲಿ ಮೂರು ತಿಂಗಳಿನಿಂದ ಅಲ್ಲಿರುವ ನ್ಯಾಯ ಬೆಲೆಯ ಅಂಗಡಿಗಳಿಗೆ ಅಕ್ಕಿಯನ್ನು ಕೊಟ್ಟಿಲ್ಲ ಸನ್ಮಾನ್ಯ ಸಿಂಧ್ಯಾರವರೆ. ಅವರೆಲ್ಲಾ ಬಂದಿದ್ದರು. ಹಿಂದಿನ ತಿಂಗಳ 25ನೇ ತಾರೀಖಿಗೆ ಕೊಡಬೇಕಾಗಿರುವುದು ಹೋಗಿಲ್ಲ ಅಂದರೆ ಅದರ ಅರ್ಥವೇನೆಂದರೆ, ಡಿಸ್ಟ್ರಿಬ್ಯೂಟ್ ಆಗಬೇಕಾದಂಥ ಅಕ್ಕಿ, ಗೋಧಿ ಕಾಳಸಂತೆಯಲ್ಲಿ ನಿರಂತರವಾಗಿ ಮಾರಾಟವಾಗುತ್ತಿರುವಂಥ ಸಂದರ್ಭದಲ್ಲಿ ನಾವು ಸರ್ಕಾರವನ್ನು ಕೇಳುವಂಥದ್ದು ಇದು ನಿರಂತರವಾಗಿ ಇರುವ ಒಂದು ಜಾಲವಿದೆ ನಾನು ಹಳ್ಳಿಯ ಭಾಷೆಯಲ್ಲಿ ಹೇಳುತ್ತೇನೆ. 'ಹೆತ್ತ ತಾಯಿಯೆ ತನ್ನ ಮಗುವಿಗೆ ವಿಷಯ ಹಾಲನ್ನು ಕುಡಿಸಿದರೆ' ಆ ಮಗುವನ್ನು ಯಾರು ರಕ್ಷಣೆ ಮಾಡಬೇಕು? ಉನ್ನತ ಅಧಿಕಾರಿಗಳು, ಫುಡ್ ಕಾರ್ಪೋರೇಷನ್ ಅಧಿಕಾರಿಗಳು, ರಾಜಕಾರಣಿಗಳು ಇದರ ಜೊತೆಯಲ್ಲಿ ಶಾಮೀಲಾಗಿ ಇದರ ಹಗಲು ದರೋಡೆ ನಡೆಯುತ್ತಿದೆ ಎಂದು ಹೇಳುವಂಥ ಸಂದರ್ಭದಲ್ಲಿ ನನ್ನ ಒತ್ತಾಯ ಏನೆಂದರೆ, ಇದರ ಕೊನೆಯಾಗಬೇಕಲ್ಲಾ. ಇವತ್ತು ಒಳ್ಳೆಯ ಪ್ರಸ್ತಾಪವನ್ನು ನಮ್ಮ ಸ್ನೇಹಿತರು ಮಾಡಿದರು, ಇವತ್ತು ಯೂಟಿಲೈಜೇಶನ್ ಸರ್ಟಿಫಿಕೇಟ್ ಕಳುಹಿಸಿ.

ಶ್ರೀ ಜಿ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೆ, ತಾವು ಹೇಳುವುದಕ್ಕೆ ಮುಂಚೆ ಈ ಚರ್ಚೆಯನ್ನು ಮುಂದುವರೆಸುವುದಕ್ಕೆ ಯಾರಿಗೂ ಗೌರವವನ್ನು ತರುವುದಿಲ್ಲ you must tool it.

ಮಾನ್ಯ ಶ್ರೀ ರಮೇಶ್‌ಕುಮಾರ್‌ರವರು ಪಾಯಿಂಟ್ ಆಫ್ ಆರ್ಡರ್‌ನ್ನು ರೇಸ್ ಮಾಡಿದ್ದಾರೆ, ತಾವು ಅದಕ್ಕೆ ಏನಾದರೂ ಹೇಳಬೇಕು.

ಅಧ್ಯಕ್ಷರು:– ಮಾನ್ಯ ರಮೇಶ್‌ಕುಮಾರ್‌ರವರು ತಂದಿರುವ ಪಾಯಿಂಟ್ ಆಫ್ ಅರ್ಡರನ್ನು ಎತ್ತಿ ಹಿಡಿದಿದ್ದೇನೆ. ನಮ್ಮ ಮನವನ್ನು ಒಲಿಸುವುದಕ್ಕೆ ಒಂದು ಪ್ರಿಲಿಮಿನರಿ ಸಬ್‌ಮಿಷನ್ ಏನು ಮಾಡಬೇಕು, ಆ ಸೀಮಿತವಾದ ಒಂದು ಪರಿಮಿತಿಯಲ್ಲಿ ತಾವು ಘಾದವನ್ನು ಮಂಡಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಿಮಗೆ ಮನವರಿಕೆಯಾಗಿದೆಯಾ?

ಅಧ್ಯಕ್ಷರು:– ತಾವು ಡಿಟೇಲ್ಸ್‌ಗೆ ಹೋಗಬಾರದು, ಆ ಪರಿಮಿತಿಯಲ್ಲಿ ತಾವು ನನ್ನ ಮನವನ್ನು ಒಲಿಸುವುದಕ್ಕೆ ಏನು ವಾದವನ್ನು ಮಾಡಬೇಕೋ ಅದನ್ನು ಮಾಡಿ.

Sri K. Jayaprakash Hegde:- I am on a point of order.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಯಡಿಯೂರಪ್ಪನವರೆ, ತಾವು ವಿರೋಧ ಪಕ್ಷದ ನಾಯಕರಾಗಿ ಚರ್ಚೆಯನ್ನು ಮುಂದುವರೆಸಿ ಎಂದು ಹೇಳಿದರೆ...

(ಗೊಂದಲ)

ಅಧ್ಯಕ್ಷರು:– ದಯಮಾಡಿ ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಅಧ್ಯಕ್ಷರೆ, ಅವರು ಮುಂದೆ ಹೋಗುತ್ತಿದ್ದಾರೆ, ಹಳೆಯ ಪಾಯಿಂಟ್ ಆಫ್ ಆರ್ಡರ್‌ಗೆ ರೂಲಿಂಗ್‌ನ್ನು ಕೊಟ್ಟಾಯಿತಲ್ಲಾ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ನಾವು ಏನು ಮಾಡಬೇಕು ಎಂದು ತಾವು ಹೇಳಿದರೆ.

Sri K. Jayaprakash Hegde:- New point of order,

ಅಧ್ಯಕ್ಷರು:– ಮಾನ್ಯ ಸದಸ್ಯರು...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ನಾನು ಬೇರೆ ವಿಷಯಕ್ಕೆ, ಅವರು ಪುನಃ ಕಂಟಿನ್ಯೂ ಮಾಡಿದ್ದಕ್ಕೆ.......

ಅಧ್ಯಕ್ಷರು:– ಇದು ಸತ್ಸಸಂಪ್ರದಾಯ, ಇಂತಹ ನಿಲುವಳಿ ಸೂಚನೆ ಬಂದಾಗ, ನಾನು ಒಪ್ಪಿಗೆಯನ್ನು ಕೊಡಬೇಕಾದರೆ, ಆ ಒಂದು ಪ್ರಿಲಿಮಿನರಿ ಸಬ್‌ಮಿಷನ್ ಇದೆ, ಒಂದು ಪರಿಮಿತಿಯೊಳಗೆ ವಾದ ಮಾಡಬೇಕಾಗಿರುವುದು ಸತ್ಸಸಂಪ್ರದಾಯ. ಆದ್ದರಿಂದ ತಾವು ಆ ಒಂದು ಪರಿಮಿತಿಯಲ್ಲಿ ತಮ್ಮ ವಾದವನ್ನು ತಾವು ಮಾಡಬೇಕೆಂದು ತಮಗೆ ಹೇಳುತ್ತೇನೆ.

ಶ್ರೀ ಕೆ. ಜಯಪ್ರಕಾಸ್ ಹೆಗ್ಡೆ:– ಮಾನ್ಯ ಅಧ್ಯಕ್ಷರೆ, I am on a different point of order. ಇವತ್ತು ಉತ್ತರ ಹೇಳಿದ್ದಾಯಿತು ಎಂದು ಹೇಳುತ್ತಾರೆ. ಅಕಾಡೆಮಿಕ್ ಇಂಟ್ರೆಸ್ಟ್, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಸದನ ಸಮಿತಿಯನ್ನು ರಚನೆ ಮಾಡಿ ಎಂದು ಕೇಳಿದ್ದಾಗಿದೆ. ಸರ್ಕಾರ ಅದಕ್ಕೆ ಉತ್ತರವನ್ನು ಹೇಳಿದರೆ, ಅದಕ್ಕೆ ಅವರು ಬೇಡಿಕೆಗೆ ಉತ್ತರವನ್ನು ಹೇಳಿದಂತಾಗುತ್ತದೆ. ನಾವು ಏನು ಚರ್ಚೆಯನ್ನು ಮಾಡಿ ಸದನ ಸಮಿತಿಯನ್ನು ರಚಿಸಿ ಎಂದು ಕೇಳಿದ ಮೇಲೆ, ಮತ್ತೆ ಏನಾದರೂ ಚರ್ಚೆ ಇದೆಯಾ? ಅವರ ಬೇಡಿಕೆ ಅಯಿತು ಅಂತಾಯಿತು.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ, ಪ್ರಾರಂಭದಲ್ಲಿ ಪ್ರಿಲಿಮಿನರಿ ಅರ್ಗ್ಯುಮೆಂಟ್ಸ್ ಮಾಡಿ ನಿಮ್ಮ ಮನವನ್ನು ಒಲಿಸಿ ಅದನ್ನು ಒಪ್ಪಿಕೊಳ್ಳುವುದಾ ಅಥವಾ ಅದನ್ನು ಬಿಡುವುದಾ ಅದರ ಬಗ್ಗೆ ಪ್ರಿಲಿಮಿನರಿ ಅರ್ಗ್ಯುಮೆಂಟ್ ಆಗಬೇಕು. ಈಗ ಅದನ್ನು ಮಾನ್ಯ ಯಡಿಯೂರಪ್ಪನವರು ಮಾಡಿದ್ದಾರೆ, ಅವರು ಅದನ್ನು ಯಾವ ರೀತಿಯಾಗಿ ಮಾಡಿದ್ದಾರೆ ಎನ್ನುವುದು ಅದು ಬೇರೆ ವಿಚಾರ, ನಾವು ಅದರ ಬಗ್ಗೆ ಮಾತನಾಡುವುದು ಇದೆ, ಬೇರೆ ಪಕ್ಷದ ಮುಖಂಡರು ಮಾತನಾಡುವುದು ಇದೆ, ಪ್ರಿಲಿಮಿನರಿ ಸಬ್‌ಮಿಷನ್ ಮಾಡಬೇಕಾದ ಅವಶ್ಯಕತೆ ಇದೆ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಈಗ ಯಡಿಯೂರಪ್ಪನವರು ಡಿಟೇಲ್ಸ್‌ಗೆ ಹೋಗುತ್ತಿದ್ದಾರೆ, ಪಾಯಿಂಟ್ ಆಫ್ ಆರ್ಡರ್ ಆಗುತ್ತದೆ ಎನ್ನುವ ಪ್ರಶ್ನೆಯನ್ನು ಒಂದು ಕಡೆ ಇಟ್ಟರೂ ಕೂಡ, ನಾವು ಇನ್ನು ಉಳಿದಿದ್ದೇವೆ, ಪ್ರಿಲಿಮಿನರಿ ಅರ್ಗ್ಯುಮೆಂಟ್ ಮಾಡಬೇಕು, ನಮಗೂ ಅವಕಾಶವನ್ನು ಮಾಡಿಕೊಡಿ, ನಾವು ಪ್ರಿಲಿಮಿನರಿ ಅರ್ಗ್ಯುಮೆಂಟ್ ಮಾಡಿ ತಮ್ಮ ಮನವನ್ನು ಒಲಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ, ಏಕೆ ಅದನ್ನು ಅಲೌ ಮಾಡಬೇಕೆಂದು ಹೇಳಿ, ಅಷ್ಟಾದರೂ ದಯವಿಟ್ಟು ಮಾಡಿ.

ಅಧ್ಯಕ್ಷರು:- ಆಯಿತು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಏನು ಎಂದು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದಾರೆ, ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡದಾದಂಥ ಹಗರಣ ನಡೆದಿರಲಿಕ್ಕಿಲ್ಲವೆನ್ನುವ ಒಂದು ನನ್ನ ಅನಿಸಿಕೆ. ಪತ್ರಿಕೆಯಲ್ಲಿ 50 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಕಿಮ್ಮತ್ತಿನ ಅನಧಿಕೃತವಾಗಿ ಸಂಗ್ರಹ, ಗೋಡೌನ್‌ಗಳಲ್ಲಿ ಸಂಗ್ರಹ, ಅವರ ಹೆಸರುಗಳೂ ಸಹಿತ ಬಂದವು, ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಏನೆಂದರೆ, ಎಂತಹ ದೊಡ್ಡ ವ್ಯಕ್ತಿಗಳೇ ಇರಲಿ, ಅವರನ್ನು ರಕ್ಷಣೆ ಮಾಡುವುದಿಲ್ಲವೆನ್ನುವ ಒಂದು ಮಾತನ್ನು ಹೇಳಿದರು. ಇಲ್ಲಿ ನಾನು ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದೇನೆಂದರೆ, ಇದು ಸಾರ್ವಜನಿಕವಾಗಿ ಬಹಳ ಮಹತ್ವವಾದಂಥ ಸದನದಲ್ಲಿ ಚರ್ಚಿಸುವಂಥದ್ದು, ಇದಕ್ಕೆ ಮೂಲ ಕಾರಣವೇನೆಂದರೆ, ಇದರಲ್ಲಿ ಕೇವಲ ಅಧಿಕಾರಿಗಳ ಶಾಮೀಲು ಇಲ್ಲ, ಇದರಲ್ಲಿ ರಾಜಕಾರಣಿಗಳು ಶಾಮೀಲಾಗಿದ್ದಾರೆ. ಬಹುಶಃ ಮಾಜಿ ಮಂತ್ರಿಗಳು ಶಾಮೀಲಾಗಿರಬಹುದು, ಹಿಂದೆ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದವರು ಶಾಮೀಲಾಗಿರಬಹುದು, ಇದು ಕೇವಲ ಸಿಓಡಿ ತನಿಖೆ ನಡೆಯುತ್ತಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವರು ಯಾವಾಗ ಸಿಓಡಿ ತನಿಖೆ ನಡೆಯುತ್ತಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವರು ಯಾವಾಗ ಸಿಓಡಿ ತನಿಖೆಯನ್ನು ಪ್ರಾರಂಭ ಮಾಡಿದರು, ಆಗ ಇನ್ನು ಸರ್ಕಾರ ಅಸ್ತಿತ್ವದಲ್ಲಿ ಬಂದಿರಲಿಲ್ಲ, ಇವತ್ತು ಕಾಂಗ್ರೆಸ್ ಮತ್ತು ಜೆಡಿ (ಎಸ್)ನ ಸಮ್ಮಿಶ್ರ ಸರ್ಕಾರ ಬಂದಿದೆ ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ, ಯಾರು ಮುಖ್ಯಮಂತ್ರಿಯಾಗಬೇಕು, ಯಾರು ಉಪ ಮುಖ್ಯಮಂತ್ರಿಯಾಗಬೇಕು. ಅದರ ಬಗ್ಗೆ ಇನ್ನು ಗುದ್ದಾಟ ನಡೆದಿತ್ತು, ಆ ಸಂದರ್ಭದಲ್ಲಿ ರಿಸಲ್ಟ್ ಬಂದಿತ್ತು. ಆವಾಗ ಇದನ್ನು ಸಿಓಡಿಯವರು ತೆಗೆದುಕೊಂಡರು. ಬಹುಶಃ ಆವಾಗ ಯಾವುದೋ ಒಂದು ಸರ್ಕಾರ ಅಸ್ತಿತ್ವದಲ್ಲಿ ಇಲ್ಲದಂಥ ಒಂದು ಶೂನ್ಯವಾದಂಥ ಸಂದರ್ಭದಲ್ಲಿ ಆಗ ಇದರಲ್ಲಿ ಸಿಓಡಿಯವರು ಕೈಹಾಕಿದರು. ಬಹುಶಃ ಆವಾಗ ಯಾವುದೇ ಒಂದು ಒತ್ತಡ ಇರಲಿಲ್ಲ. ಹೀಗಾಗಿ ಇವತ್ತು ಎಲ್ಲಾ ಕಡೆ ಸಿಓಡಿಯವರು

ಧಾಳಿಯನ್ನು ಮಾಡಿ ಇವತ್ತು ಸಾಕಷ್ಟು ಇದರಲ್ಲಿರುವ ವಿಷಯವನ್ನು ಬಹಿರಂಗಗೊಳಿಸಿದ್ದಾರೆ. ಆಗ ಸರ್ಕಾರ ಅಸ್ತಿತ್ವದಲ್ಲಿ ಬಂದಿರಲಿಲ್ಲ, ಇನ್ನು ಮಂತ್ರಿಮಂಡಲ ರಚನೆಯಾಗಿರಲಿಲ್ಲ, ಅಂತಹ ಸಂದರ್ಭದಲ್ಲಿ ಈ ರೀತಿಯಾದಂಥ ಪ್ರಕರಣವನ್ನು ಸಿಒಡಿಯವರು ಬಹಳ ತನಿಖೆಯನ್ನು ಮಾಡಿ ಆದಷ್ಟು ವಿಷಯಗಳನ್ನು ಹೊರಗೆ ತಂದಿದ್ದಾರೆ. ನಾನು ಇವತ್ತು ಸರ್ಕಾರಕ್ಕೆ ಹೇಳುತ್ತಿದ್ದೇನೆ ಇಲ್ಲಿಯವರೆಗೆ ಸಿಒಡಿಯವರು ಏನೇನು ತನಿಖೆಯನ್ನು ಮಾಡಿದ್ದಾರೆ ಆ ತನಿಖೆಯ ವರದಿಯನ್ನು ತಕ್ಷಣ ಬಹಿರಂಗಪಡಿಸಬೇಕು. ಏಕೆಂದರೆ ಇವತ್ತು ಸರ್ಕಾರ ಅಸ್ತಿತ್ವಕ್ಕೆ ಬಂದಿದೆ, ಇವತ್ತು ಹಲವಾರು ರಾಜಕಾರಣಿಗಳು, ಹಲವಾರು ಮುಖ್ಯವಾದಂಥ ಅಧಿಕಾರಿಗಳು ಇವತ್ತಿನ ದೊಡ್ಡದೊಡ್ಡ ತಿಮಿಂಗಲಗಳು ಇದರಲ್ಲಿ ಸಿಕ್ಕಿಹಾಕಿಕೊಮಡಿದ್ದಾರಲ್ಲಾ, ಅವರೆಲ್ಲರೂ ಸರ್ಕಾರದ ಮೇಲೆ ಪ್ರಭಾವವನ್ನು ಬೀರಲಿಕ್ಕೆ ಪ್ರಾರಂಭ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳ ಮತ್ತು ಉಪ ಮುಖ್ಯಮಂತ್ರಿಗಳ ಕಡೆ ಬರುತ್ತಾರೆ. ತಮ್ಮ ಪ್ರಭಾವವನ್ನು ಬೀರಲಿಕ್ಕೆ ಪ್ರಾರಂಭ ಮಾಡುತ್ತಾರೆ. ಹೀಗಾಗಿ ಆ ಸಿಒಡಿಯ ತನಿಖೆಯ ದಿಕ್ಕು ಬೇರೆ ಕಡೆಗೆ ಹೋಗುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ಈ ಒಂದು ಸದನದಲ್ಲಿ ಎಷ್ಟೋ ಸಲ ನಾವು ಒತ್ತಾಯವನ್ನು ಮಾಡಿದ್ದೇವೆ. ಸಿಬಿಐ ತನಿಖೆ ಮಾಡಿ, ಜಂಟಿ ಸದನ ಸಮಿತಿ ಮಾಡಿ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್ ಕೈಗಾರಿಕೆ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ವಿರೋಧ ಪಕ್ಷದ ನಾಯಕರಾಗಿ ಕೆಲಸವನ್ನು ಮಾಡಿದವರು. ಮಾನ್ಯ ರಮೇಶ್‌ಕುಮಾರ್‌ರವರು ಎತ್ತಿರತಕ್ಕಂಥ ಪಾಯಿಂಟ್ ಆಫ್ ಆಡ್. ಅನ್ನು ತಾವು ಎತ್ತಿ ಹಿಡಿದಿದ್ದೀರಿ. ಪ್ರಿಲಿಮಿನರಿ ಸಬ್‌ಮಿಷನ್ ಮೂಲಕ ತಮ್ಮ ಮನವನ್ನು ಒಲಿಸಲಿಕ್ಕೆ ಏನು ಬೇಕು ಎನ್ನುವಂಥದ್ದನ್ನು ಹಿರಿಯ ಸದಸ್ಯರಾದಂಥ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಈಗ ಇವರು ಏನು ಹೇಳುತ್ತಿದ್ದಾರೆಂದರೆ, ಈಗ ಸಿಒಡಿ ಎನ್‌ಕ್ವಾಯರಿ ಮಾಡಿದ್ದು ತಪ್ಪಾ ಹಾಗಾದರೆ? ಮುಖ್ಯಮಂತ್ರಿಗಳು ಆದ ಮೇಲೆ, ಅಥವಾ ನಮ್ಮ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಸಿಒಡಿ ತನಿಖೆ ದಿಕ್ಕು ತಪ್ಪಿಸುವುದಕ್ಕೆ ಏನಾದರೂ ಪುರಾವೆ ಇದ್ದರೆ ನೀವು ಈ ಹೌಸ್ ಮುಂದೆ ಇಡಿ. ಅದು ಇಲ್ಲ. ಸುಮ್ಮನೆ ಪ್ರಚಾರಕ್ಕೋಸ್ಕರವಾಗಿ ದಿಕ್ಕುತಪ್ಪಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆಂದು ಹೇಳತಕ್ಕಮಥದ್ದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದು ಪ್ರಚಾರಕ್ಕೆ ಅಲ್ಲ, ಮಾನ್ಯ ಸಿಂಧ್ಯಾರವರು ಯಾವುದನ್ನೂ ಪ್ರಚಾರಕ್ಕೆ ಮಾಡುವುದಿಲ್ಲ ಪಾಪ. ಪ್ರಚಾರದ ಬಗ್ಗೆ ಪಾಪ ಅವರಿಗೆ ಏನೂ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು:- ದಯಮಾಡಿ ಒಬ್ಬೊಬ್ಬರು ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಯಾವಾಗಲೂ ಪ್ರಚಾರಕ್ಕೋಸ್ಕರವಾಗಿ ಕೆಲಸ ಮಾಡಿದವರು ಅಲ್ಲ. ಈ ಕಡೆ ಕುಳಿತುಕೊಂಡಿದ್ದಾಗ ಅವರು ಏನು ಮಾಡುತ್ತಿದ್ದರೆಂದು ಅವರನ್ನು ಕೇಳಬೇಕು.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಿದ್ದಾರೆ. ಅವರು ಯಿಲ್ಡ್ ಆಗಿರುವುದಿಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಿಂಧ್ಯಾರವರೆ, ನಮ್ಮದೇನೂ ಬದಲಾವಣೆಯಾಗಿಲ್ಲ, ನಿಮ್ಮದು ಬದಲಾವಣೆಯಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಏನು ಮಾಡುತ್ತಿದ್ದೀರಾ ಅದೇ ಮಾಡುತ್ತಾ ಇದ್ದೆ ನಾನು ಅಲ್ಲಿ ಕುಳಿತಾಗ.

ಶ್ರೀ ವಾಟಾಳ್ ನಾಗರಾಜ್:- ತಾವು ಎನು ಮಾಡಿದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಈಗ ನೀವು ಏನು ಮಾಡುತ್ತಿದ್ದೀರಾ ಅದನ್ನೇ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಆದನ್ನೇ ನೀವು ಈಗ ಅಲ್ಲಿ ಮಾಡಿ. ನೀವು ಇಲ್ಲಿ ಏನು ಮಾಡಿದ್ದೀರಿ ಅದನ್ನು ಅಲ್ಲಿ ಏಕೆ ಮಾಡುತ್ತಿಲ್ಲ?

ಅಧ್ಯಕ್ಷರು:- ಈಗ ಏನು ಚರ್ಚೆ ಇದೆ, ದಯಮಾಡಿ ಅದನ್ನು ಮುಂದುವರೆಸಿ. ಆಚಾತುರ್ಯವಾಗಿ ಮಾತನಾಡುವುದರಿಂದ ಸಭೆಯ ಘನತೆ ಹೆಚ್ಚಾಗುವುದಿಲ್ಲ, ಈ ಚರ್ಚೆಗೆ ಅರ್ಥ ಪೂರ್ಣವಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ (ಕೃಷಿ ಮತ್ತು ತೋಟಗಾರಿಕೆ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ನಾಯಕರು ಒಂದು ನಿಮಿಷ ನಿಂತರೆ ಹೇಳುತ್ತೇನೆ, 20 ತಂಡಗಳಲ್ಲಿ ಸಿಓಡಿಯವರು ಹೋಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆಂದು ನಿಮ್ಮ ನಾಯಕರೇ ಹೇಳಿದರೆ, ವಿರೋಧ ಪಕ್ಷದ ಉಪ ನಾಯಕರು ಸಿಓಡಿಯವರು ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಯಾವುದನ್ನು ನಂಬುವುದು ಹೇಳಿ. ಈಗ ತಾನೇ ನಾಯಕರು ಹೇಳಿದರು. ಸಿಓಡಿಯವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಎಂದು.

ಅಧ್ಯಕ್ಷರು:- ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಾನು ಎದ್ದು ನಿಂತಿದ್ದೇನೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿರುವುದರಿಂದ ಅವರು ಮಾತನಾಡಲಿಕ್ಕೆ ಶುರು ಮಾಡಿದ್ದಾರೆ, ಉಳಿದಂಥ ನಮ್ಮ ಸ್ನೇಹಿತರು ಮಾತನಾಡಬೇಕು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಹತ್ತಿರದಿಂದ ನಾಲ್ಕೂವರೆ ವರ್ಷದಿಂದ ಈ ಘಟನಾವಳಿಗಳನ್ನು ನೋಡಿಕೊಂಡು ಬಂದಿದ್ದಾರೆ ಅವರಿಗೆ ಮನವರಿಕೆಯಾಗಿದೆ, ಇದು ತನಿಖೆಯಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಅವರು ಮೌನವಾಗಿ ಕುಳಿತಿದ್ದಾರೆ, ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿದಂಥ ನಮ್ಮ ಹಿರಿಯ ಸಚಿವರಾಗಿದ್ದಂಥ ಮಾನ್ಯ ಪ್ರಕಾಶ್‌ರವರು ಹಾಗೂ ಮಾನ್ಯ ಸಿಂಧ್ಯಾರವರು ಇಷ್ಟು ದೊಡ್ಡ ಪ್ರಮಾಣದಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ ಏಕೆ ಎನ್ನುವುದು ಇದರ ಬಗ್ಗೆ ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಕೈಗಾರಿಕೆ ಸಚಿವರು):- ಮಾನ್ಯ ಅಧ್ಯಕ್ಷರೆ, ತನಿಖೆಯಾಗಲಿ ಎಂದು ನಾನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹೇಳುತ್ತಿದ್ದೇನೆ. ನಾನು ಹೇಳುವುದನ್ನೆ ತಾವು ಕೇಳುತ್ತಿಲ್ಲ.

(ಗೊಂದಲ)

ಶ್ರೀ ಎನ್.ಎಸ್. ಭೋಸರಾಜು:- ಮಾನ್ಯ ಅಧ್ಯಕ್ಷರೆ, ನಾವು ಯಾರೂ ಮೌನವಾಗಿ ಕುಳಿತಿಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಮೌನವಾಗಿ ಕುಳಿತಿದ್ದೇವೆಂದು ಹೇಳುತ್ತಿದ್ದಾರೆ, ನೀವು ಏನು ಹೇಳುತ್ತಿದ್ದಿರೆಂದು ನಾವು ಕೇಳುತ್ತಿದ್ದೇವೆ ಅಷ್ಟೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನನ್ನದೊಂದು ಸಜೆಷನ್ ಇದೆ.

ಅಧ್ಯಕ್ಷರು:– ದಯಮಾಡಿ ತಾವು ಕುಳಿತುಕೊಳ್ಳಿ ಅವರು ಯಿಲ್ಡ್ ಆಗಿರುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:– ನಾನು ಹೇಳುತ್ತಿರುವುದು, ಒಂದು ಪಕ್ಷದಿಂದ ಒಬ್ಬರಿಗೆ ಅವಕಾಶವನ್ನು ಕೊಡಿ, ಎಲ್ಲರೂ ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದರೆ ಅದು ಮುಗಿಯುವುದು ಯಾವಾಗ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಸಿಓಡಿ ತನಿಖೆ ಮಾಡುವಾಗ ಸರ್ಕಾರ ಆಸ್ತಿತ್ವಕ್ಕೆ ಬಂದಿರಲಿಲ್ಲ, ಮಂತ್ರಿಮಂಡಲ ರಚನೆಯಾಗಿರಲಿಲ್ಲ, ಅಲ್ಲಿಯವರೆಗೂ ಸರಿಯಾದ ದಿಕ್ಕಿನಲ್ಲಿ ಸಿಓಡಿಯವರು ಸರಿಯಾಗಿಯೇ ಕೆಲಸವನ್ನು ಮಾಡಿದ್ದಾರೆಂದು ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ಸಿಓಡಿಗೆ ಒಂದು ಫ್ರೀಡಂ ಕೊಡಿ, ಅವರು ಸರಿಯಾದಂಥ ಕೆಲಸವನ್ನು ಮಾಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ:– ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ತಂದಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನೀವು ಹಾಗೆಯೇ ಮಾತನಾಡಿದರೆ ನಾವು ಏನು ಮಾಡುವುದು? ನಮ್ಮ ಮಾನ್ಯ ರಮೇಶ್‌ಕುಮಾರ್‌ರವರು ಪಾಯಿಂಟ್ ಆಫ್ ಆರ್ಡರ್ ಮೂಲಕ ಒಂದು ಒಳ್ಳೆಯ ಸಂಪ್ರದಾಯ ಹೇಳಿದ್ದರ ಬಗ್ಗೆ ಎಲ್ಲಾ ಮಾನ್ಯ ವಿರೋಧ ಪಕ್ಷದವರು ಒಪ್ಪಿಕೊಂಡಿದ್ದಾರೆ. ದಯವಿಟ್ಟು ಈಗ ನಾನು ಹೇಳುವುದೇನೆಂದರೆ, ಒಂದು ಪಕ್ಷದಿಂದ ಒಬ್ಬರಿಗೆ ಮಾತನಾಡಲು ಅವಕಾಶವನ್ನು ಕೊಡಿ. ಅವರ ನಾಯಕರು ಈಗ ಸಬ್‌ಮಿಷನ್ ಮಾಡಿದ್ದಾರೆ ಅದೇ ರೀತಿ ಉಳಿದವರಿಗೂ ಕೊಟ್ಟ ಕೂಡಲೇ ಅದರ ಬಗ್ಗೆ ತಾವು ನಿರ್ಣಯವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಎರಡು–ಮೂರು ದಿವಸಗಳನ್ನು ಮಾಡಿದರೆ ಅದು ಕೊನೆಯಾಗುವುದಿಲ್ಲ. ಆ ಕಾರಣದಿಂದ ಉಳಿದ ಮಾನ್ಯ ಸದಸ್ಯರಲ್ಲಿ ಮಾಡುವ ಅವಶ್ಯಕತೆ ಇಲ್ಲವೆಂದು ನನ್ನ ಸೂಚನೆ ಇದೆ.

ಅಧ್ಯಕ್ಷರು:– ಆಯಿತು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಬ್ಬರಿಗೆ ಒಂದು ಪಕ್ಷದಿಂದ ಅವಕಾಶ ಮಾಡಿಕೊಡಿ ಎಂದು ಹೇಳಿದರು, ದಯವಿಟ್ಟು ಅದು ಅಲ್ಲ. ನಿಯಮಾವಳಿಗಳ ಪ್ರಕಾರ ಎಷ್ಟು ಮಂದಿ ಅ ಸೂಚನೆಗೆ ಸಹಿಯನ್ನು ಮಾಡಿದ್ದಾರೆ ಅವರೆಲ್ಲರಿಗೂ ಅಲೌ ಮಾಡಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಹೆಚ್ಚು ಡಿಟೇಲ್ಸ್‌ಗೆ ಹೋಗುವುದಿಲ್ಲ, ಚರ್ಚೆಗೆ ಅವಕಾಶವನ್ನು ಕೊಟ್ಟ ನಂತರ ಡಿಟೇಲ್ಸ್‌ಗೆ ಹೋಗುತ್ತೇನೆ. ಈಗ ನಾನು ಹೇಳುವಂಥದ್ದು, ಎರಡು ಪಾಯಿಂಟ್ ಇವೆ, ಒಂದನೆಯದಾಗಿ ಸಿಓಡಿ ಯಾವರೀತಿಯಾಗಿ ಅಸೆಸ್ಟ್ ಆಗಿ, ಒಂದು

ಎಫಿಸಿಯೆಂಟಾಗಿ ಕೆಲಸವನ್ನು ಮಾಡುತ್ತಿತ್ತು ಅದು ಈಗ ಸ್ಲೋಡೌನ್ ಆಗಿದೆ. ಈ ಸರ್ಕಾರ ಒಂದು ಆಸ್ತಿತ್ವಕ್ಕೆ ಬಂದ ಮೇಲೆ, ಮಂತ್ರಿಮಂಡಲ ರಚನೆಯಾದ ಮೇಲೆ, ಇದರ ಬಗ್ಗೆ ಪತ್ರಿಕೆಯಲ್ಲಿ ಕೂಡ ಬಂದಿದೆ. ಹಗರಣ ಕಿರಿದಾಗಿಸುವಲ್ಲಿ ಸಿಓಡಿ ಆತುರದಲ್ಲಿದೆ ಈಗಾಗಲೇ ಚಾಲು ಆದವು. ಯಾರ್‍ಯಾರು ಕೆಲವು ಮುಖ್ಯ ಆರೋಪಿಗಳು ಇದ್ದರು, ಅವರು ಇಮ್ಮೀಡಿಯೇಟ್ ಜಾಮೀನು ಕೊಟ್ಟು ಹೊರಗೆ ಬರುತ್ತಿದ್ದಾರೆ. ಯಾರು ಕೆಲವೊಬ್ಬರು ಮಹತ್ವವಾದ ವ್ಯಕ್ತಿಗಳು ಇದ್ದಾರೆ, ಅವರನ್ನು ಅರೆಸ್ಟ್ ಮಾಡಿ ಆಕ್ಷನ್ ತೆಗೆದುಕೊಳ್ಳುತ್ತಿಲ್ಲ. ಅದರ ಬಗ್ಗೆ ಡಿಟೇಲ್ಸ್ ರೆಕಾರ್ಡ್ ನನ್ನ ಹತ್ತಿರ ಇವೆ ಅದರ ಬಗ್ಗೆ ನಾನು ಹೇಳುತ್ತೇನೆ. ಹೀಗಾಗಿ ಇದರ ಬಗ್ಗೆ ಒಂದು ನಿಷ್ಪಕ್ಷಪಾತವಾದ ಒಂದು ತನಿಖೆ ಅದು ಹೆಲ್ಟ್ ಆಫ್ ಆಗುತ್ತಿದೆ. ಈ ಸರ್ಕಾರ ಆಸ್ತಿತ್ವಕ್ಕೆ ಬಂದ ಮೇಲೆ, ಅದಕ್ಕಾಗಿ ಇದರ ಬಗ್ಗೆ ಇವತ್ತು ಕೂಲಂಕುಷವಾದ ಒಂದು ತನಿಖೆಯಾಗಬೇಕು ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಕಳೆದ ಬಾರಿ ಮಾನ್ಯ ಸಿಂಧ್ಯಾರವರು ಈ ಕಡೆ ನಮ್ಮ ಜೊತೆಯಲ್ಲಿದ್ದರು, ಇವತ್ತು ಆಡಳಿತ ಪಕ್ಷದಲ್ಲಿ ಕುಳಿತಿದ್ದಾರೆ. ಆಗ ನಾವೂ ಕೂಡ ಅವರ ಜೊತೆಯಲ್ಲಿಯೇ ಹೋರಾಟ ಮಾಡಿದ್ದೇವೆ, ಕಾಮಗಾರಿಗಳಲ್ಲಿ ಏನು ಅವ್ಯವಹಾರವಾಗಿದೆ, ಇವತ್ತು ಮಾನ್ಯ ಖರ್ಗೆಯವರು ಸದನದಲ್ಲಿ ಹಾಜರಿ ಇಲ್ಲ ಅವರು ಇರಬೇಕಾಗಿತ್ತು ಕಳೆದ ಅಧಿವೇಶನದಲ್ಲಿ ನಾವೆಲ್ಲಾ ಇಲ್ಲಿ ಪ್ರಸ್ತಾಪ ಮಾಡಿ ಧರಣಿ ಕುಳಿತಿದ್ದೆವು, ಬರಗಾಲ ಕಾಮಗಾರಿಗಳಲ್ಲಿ ಕೋಟ್ಯಾಂತರ ರೂಪಾಯಿಗಳು ಲೂಟಿಯಾಗುತ್ತದೆ ಎನ್ನುವಂಥ ವಿಷಯವನ್ನು ಪ್ರಸ್ತಾಪ ಮಾಡಿದೆವು, ಆಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಕೃಷ್ಣರವರು ಏನು ಹೇಳಿದರೆಂದರೆ, ಯಾವುದೋ ಒಂದೆರಡು ಸಣ್ಣ-ಪುಟ್ಟ ಹಗರಣಗಳು ಆಗಿರಬಹುದು, ಶಾಸಕರ ಅಧ್ಯಕ್ಷತೆಯಲ್ಲಿ ಎಲ್ಲಾ ಸಭೆಗಳು ನಡೆಯುವಂಥದ್ದು ಯಾವ ಹಗರಣಗಳು ಆಗಿಲ್ಲ, ಅವ್ಯವಹಾರವಾಗಿಲ್ಲವೆನ್ನುವುದರ ಬಗ್ಗೆ ಅಸಂದರ್ಭದಲ್ಲಿ ಹೇಳಿದರು. ನಾವು ಧರಣಿ ಕುಳಿತೆವು, ಎಲ್ಲಿಯವರೆಗೆ ಅಂದರೆ ಒಂದು ಜಂಟಿ ಸದನ ಸಮಿತಿ ಮಾಡಿ ಎಂದು ಹೇಳಿ, ಮಾನ್ಯ ಕೆ. ಜಯಪ್ರಕಾಶ್ ಹೆಗ್ಡೆಯವರು ಇದ್ದರು, ಕಾಂಗ್ರೆಸ್‌ನವರೇ ಅದರಲ್ಲಿ ಛೇರ್ಮನ್‌ರಾಗಿ ಇರುತ್ತೀರಿ, ಆಡಳಿತ ಪಕ್ಷದ ಹೆಚ್ಚು ಸದಸ್ಯರೇ ಅಲ್ಲಿ ಇರುತ್ತೀರಿ, ಒಂದು ಜಂಟಿ ಸದನ ಸಮಿತಿ ನೇಮಕ ಮಾಡಿದರೆ ಈ ಒಂದು ತನಿಖೆಗೆ ಹೆಚ್ಚು ಶಕ್ತಿ ಬರುತ್ತದೆ ಎನ್ನುವ ಮಾತನ್ನು ಹೇಳಿದಿರಿ. ಬಹುಶಃ ಆಗ ಆ ಸರ್ಕಾರ ಜಂಟಿ ಸದನ ಸಮಿತಿ ನೇಮಕ ಮಾಡಿದ್ದರೆ ಇವತ್ತು 50 ಕೋಟಿ ರೂಪಾಯಿಗಳಷ್ಟು ಸಿಓಡಿಯವರು ಏನು ತನಿಖೆಯನ್ನು ಮಾಡಿದ್ದಾರೆ, ಏನು ಹಿಡಿದಿದ್ದಾರೆ, ಆ ಒಂದು ಸರ್ಕಾರದಲ್ಲಿಯೇ ಇದನ್ನು ಹಿಡಿಯುವುದಕ್ಕೆ ಸಾಧ್ಯವಿತ್ತು. ಆಗ ಬರಗಾಲ ಕಾಮಗಾರಿಗಳಲ್ಲಿ ನಮ್ಮ ರೈತಬಾಂಧವರಿಗೆ ಮೂರು ವರ್ಷಗಳ ಸತತ ಬರಗಾಲ ಅದನ್ನು ತಪ್ಪಿಸಲಿಕ್ಕೆ ಸಾಧ್ಯವಿತ್ತು. ಅದನ್ನು ಅವರು ಮಾಡಲಿಲ್ಲ. ಹಿಂದಿನ ಸರ್ಕಾರ ಏನು ತಪ್ಪು ಮಾಡಿದೆ ಅದನ್ನು ನಮ್ಮ ಮಿತ್ರರಾದ ಜೆಡಿ (ಎಸ್) ದವರು ವಿರೋಧ ಪಕ್ಷದಲ್ಲಿದ್ದು ಹೋರಾಟ ಮಾಡಿದ್ದರು, ಇವತ್ತು ಅಲ್ಲಿ ಹೋಗಿ ಡಿಫೆಂಡ್ ಮಾಡುವಂಥ ಪರಿಸ್ಥಿತಿಯಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಯಮಾಡಿ ಈ ವಿಚಾರದಲ್ಲಿ ಇಷ್ಟೆ. ಈ ಹಂತವನ್ನು ನಾವು ಈಗ ತಲುಪಿಲ್ಲ. ಕ್ರಿಯಾಲೋಪದ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ

ಮಾಡುವಾಗ ತಾವು ಒಂದು ಮಾರ್ಗದರ್ಶನವನ್ನು ಮಾಡಿದ್ದೀರಿ. ಇದನ್ನು ನನಗೆ ಮನಮೊಲಿಸಿ ನಿಯಮಾವಳಿಗಳ ಕೆಳಗಡೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದರ ಬಗ್ಗೆ ಮನವರಿಕೆ ಮಾಡಿಕೊಡಿ ಎಂದು ಹೇಳಿದ್ದೀರಿ. ಅದರ ಬಗ್ಗೆ ನಮ್ಮ ಎಲ್ಲಾ ಸದಸ್ಯರುಗಳೂ ಕೂಡ ನಾವು ಸಹಿ ಮಾಡಿದವರು ನಾವು ಮಾತನಾಡುತ್ತೇವೆಂದು ಹೇಳಿದ್ದಾರೆ ಅವರು ತಮ್ಮ ಮನವೊಲಿಸುವುದಕ್ಕೆ ತಮ್ಮ ವಿಚಾರಗಳ ಹಿನ್ನಲೆಯಲ್ಲಿ ಮಾತನಾಡಿದರು. ಆದರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುವಂಥ ಈ ಸಂದರ್ಭದಲ್ಲಿ ಆ ಇಡೀ ಚರ್ಚೆಯ ವಿಚಾರವನ್ನು ಬೇರೆ ಕಡೆಗೆ ತಿರುಗಿಸುತ್ತಿದ್ದಾರೆ. ಅದರ ಮೆರಿಟ್ ಆಫ್ ದಿ ಕೇಸ್‌ನ್ನು ತಾವು ಮಾತನಾಡುತ್ತಿದ್ದೀರಿ. ತಾವು ಹೇಳಿದ್ದನ್ನು ಮಾಡುವುದು ಅದು ಮುಂದಿನ ಹಂತದಲ್ಲಿ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರುಗಳು ಅನುಭವಿಗಳಿದ್ದಾರೆ ಒಂದು ವಿಷಯವನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಹಾಸನ–ಮೇ–26, ಅದರ ವಿವರಕ್ಕೆ ನಾನು ಹೋಗುವುದಿಲ್ಲ. "ಬರಪರಿಹಾರ ಯೋಜನೆಯಡಿ ಜಿಲ್ಲೆಗೆ ಬಿಡುಗಡೆಯಾದ ಆಹಾರಧಾನ್ಯದಲ್ಲಿ ಶೇಕಡಾ 70ರಷ್ಟು ದುರುಪಯೋಗವಾಗಿದೆ ಎಂದು ಜಾತ್ಯಾತೀತ ಜನತಾದಳ ಮುಖಂಡ ಹೊಳೆನರಸೀಪುರದ ಶಾಸಕ ಹೆಚ್.ಡಿ. ರೇವಣ್ಣರವರು ಆರೋಪಿಸಿದರು. ಅಧಿಕಾರಿಗಳೇ ಆ ಆಹಾರಧಾನ್ಯ ದುರುಪಯೋಗಕ್ಕೆ ಹೊಣೆಗಾರರು, ಜಿಲ್ಲಾಧಿಕಾರಿಯವರು ಈ ವೇಳೆಗಾಗಲಿ ದಾಖಲಾತಿಗಳನ್ನು ವಶಪಡಿಸಿಕೊಳ್ಳಬೇಕಾಗಿತ್ತು ಆದರೆ ಇದುವರೆಗೆ ಅದರ ಬಗ್ಗೆ ಕ್ರಮವನ್ನು ಕೈಗೊಂಡಿರುವುದಿಲ್ಲ. ಈಗಲಾದರೂ ದಾಖಲಾತಿಗಳನ್ನು ವಶಪಡಿಸಿಕೊಂಡು ಸಮಗ್ರ ತನಿಖೆಯನ್ನು ನಡೆಸಬೇಕೆಂದು ಯಾರು ಹೇಳಿದ್ದಾರೆ, ಒಬ್ಬ ಜವಾಬ್ದಾರಿಯುತ ಸಚಿವರು. ಇದರ ಅರ್ಥ ನಮ್ಮೆಲ್ಲರಿಗೂ ಸತ್ಯ ಏನು ಎನ್ನುವುದು ಗೊತ್ತಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ, ಈ ರೀತಿ ಜಿಲ್ಲಾಧಿಕಾರಿಗಳು ಆಫೀಸರ್ಸ್‌ಗಳು, ಪೊಲೀಸ್ ಅಧಿಕಾರಿಗಳು ಶಾಮೀಲಾಗಿರುವಂಥ ಇಂತಹ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾದದ್ದು ಒಂದು ಕಡೆ, ಸಿಒಡಿಯ ಪ್ರಗತಿ ಏನಾಗಿದೆ ಎನ್ನುವುದನ್ನು ತಿಳಿಸುವುದು ಮತ್ತೊಂದು ಕಡೆ, ನಮ್ಮಲ್ಲಿರುವಂಥ ವಿವರಗಳನ್ನು ಕೊಡುತ್ತೇವೆ ಅದರ ಉಪಯೋಗವನ್ನು ಮಾಡಿಕೊಂಡು ಇನ್ನು ಮುಂದೆ ಇಂತಹ ಲೂಟಿಯಾಗದಂತೆ ನೋಡಿಕೊಳ್ಳಬೇಕು ಎಂದಾಗ ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತುಕೊಂಡು, ಮಾನ್ಯ ಅಧ್ಯಕ್ಷರೆ ನೀವು ಬೇಕಾದಷ್ಟು ಸಮಯವನ್ನು ಕೊಡಿ, ಸರ್ಕಾರದ ಗಮನಕ್ಕೆ ತರಲಿ ನಾನು ತನಿಖೆ ಮಾಡಿಸುತ್ತೇನೆ ಬೇಕಾದ ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತೇನೆಂದು ಹೇಳುವುದನ್ನು ಬಿಟ್ಟು ಪಾಯಿಂಟ್ ಆಫ್ ಆರ್ಡರ್, ಅಂದರೆ, ಹಾಗಾದರೆ ಇದರ ಬಗ್ಗೆ ನಾನು ನಿಮ್ಮನ್ನು ಕೇಳುತ್ತೇನೆ. ಏನು ವಿವರಗಳನ್ನು ಕೊಡದೆ, ಅಧ್ಯಕ್ಷರಿಗೆ ಮನಮೊಲಿಸುವುದು ಹೇಗೆ ಎನ್ನುವುದರ ಬಗ್ಗೆ ತಾವು ಹೇಳಿ ಕೊಟ್ಟರೆ ನಾವು ಅದೇ ರೀತಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರಿಗೆ ಯಾವ ರೀತಿಯಾಗಿ ಈ ಸದನದಲ್ಲಿ ಮಾತನಾಡಬೇಕೆಂದು ಹೇಳುವಂಥ ದಾಶ್ಯತೆಯನ್ನು ನಾನು ತೋರಿಸುವುದಿಲ್ಲ. ಆದರೆ ನಾವು ನಿಯಮಾವಳಿಗಳ ಪ್ರಕಾರ ಈ ಸದನದ ಕಲಾಪಗಳನ್ನು ನಡೆಸಿಕೊಂಡು

ಹೋಗಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ. ಆ ಜವಾಬ್ದಾರಿಗಳಿಗೆ ಅನುಗುಣವಾಗಿ ತಾವು ಮಾರ್ಗದರ್ಶನವನ್ನು ಮಾಡಿದ್ದೀರಿ. ಈಗ ಇರತಕ್ಕಂಥದ್ದು ಈ ನಿಲುವಳಿ ಸೂಚನೆಯ ಪ್ರಶ್ನೆ. ಇದು ಅತ್ಯಂತ ಜರೂರಾಗಿ ಇರಬೇಕು ಎನ್ನುವ ಕಾರಣಕ್ಕಾಗಿಯೇ ತಾವು ಚರ್ಚೆಗೆ ತೆಗೆದುಕೊಳ್ಳಬೇಕು, ಚರ್ಚೆಗೆ ಯಾವ ವಿಷಯ ಗ್ರಾಸ ಆಗಬೇಕೆನ್ನುವುದು ಬೇರೆ, ಚರ್ಚೆಗೆ ಈ ನಿಯಮಾವಳಿಗಳ ಪ್ರಕಾರ ಎಲ್ಲಾ ಅರ್ಹತೆಯನ್ನು ಪಡೆದಿದೆ ಆ ಕಾರಣಕ್ಕಾಗಿ ಇದನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳತಕ್ಕಂಥ ವಿಚಾರ ಬೇರೆ, ಅದನ್ನು ನಾವು ಗಮನಕ್ಕೆ ತಂದಿದ್ದೇವೆ ವಿನಹಃ ಯಾವುದನ್ನು ಮಾತನಾಡಬೇಕು, ಯಾವುದನ್ನು ಮಾತನಾಡಬಾರದು ಎನ್ನತಕ್ಕಂಥ ವಿಷಯ ಅಲ್ಲ, ತಾವೆಲ್ಲಾ ಸದಸ್ಯರು ಇದಕ್ಕೆ ಯಾರ್‍ಯಾರು ಸಹಿ ಮಾಡಿದ್ದಾರೆ ಅವರ ಎಲ್ಲಾ ಅಭಿಪ್ರಾಯಗಳನ್ನು ಆ ಇಡೀ ವಿಚಾರಗಳ ಬಗ್ಗೆ ವಿವರಗಳ ಬಗ್ಗೆ ಹೋಗಲಾರದಂಥ ರೀತಿಯಲ್ಲಿ ಈ ನಿಲುವಳಿ ಸೂಚನೆ ಇತ್ತೀಚೆಗಷ್ಟೆ ನಡೆದಿರುವಂಥ ವಿಷಯಗಳಿಗೆ ಅಷ್ಟೆ ಸೀಮಿತವಾಗಿರಬೇಕು, ನಿಲುವಳಿ ಸೂಚನೆಗೆ ಹಕ್ಕುಭಾದ್ಯತೆಯನ್ನು ಪ್ರಶ್ನಿಸಿರುವಂಥೆ ಇರಕೂಡದು. ಅದೇ ಅಧಿವೇಶನದಲ್ಲಿ ಚರ್ಚೆಯಾಗಲಾರದಂತೆ ಇರಬೇಕು, ಇವೆಲ್ಲಾ ನಿಯಮಾವಳಿಗಳ ಪ್ರಕಾರ ಇದೆ ಅದೆಲ್ಲಾ ಅವರಿಗೆ ಗೊತ್ತಿರುವಂಥದ್ದು. ಈ ವಿಚಾರದ ಪ್ರಕಾರ ತಾವು ಪ್ರಸ್ತಾಪವನ್ನು ಮಾಡಿ ಅಧ್ಯಕ್ಷರ ಮನವೊಲಿಸಿ ಅದಕ್ಕೆ ಅವಕಾಶವನ್ನು ಅವರು ಕೊಟ್ಟರೆ ನಾವು ಚರ್ಚೆಗೆ ಹಿಂಜರಿಯುವುದಿಲ್ಲ. ಈ ಉತ್ತರವನ್ನೂ ಕೂಡ ಮಾನ್ಯ ವಾಟಾಳ್ ನಾಗರಾಜ್‌ರವರು ತಮಾಷೆಯಾಗಿ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನೇ ಕೊಟ್ಟು ಬಿಟ್ಟಿದ್ದಾರಲ್ಲಾ ಎಂದು, ಈ ಚರ್ಚೆಯನ್ನು ನಿಲ್ಲಿಸುವಂಥ ಉದ್ದೇಶ ಈ ಸರ್ಕಾರಕ್ಕೆ ಇಲ್ಲ. ತಪ್ಪಿತಸ್ಥರನ್ನು ರಕ್ಷಿಸುವಂಥ ಉದ್ದೇಶವು ಇಲ್ಲ, ಅದಕ್ಕಿಂತಲೂ ಮುಂದೆ ಹೋಗಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎನ್ನುವಂಥದ್ದೆ ಈ ಸರ್ಕಾರದ ಉದ್ದೇಶವಾಗಿರುವುದರಿಂದ ಚರ್ಚೆ ಫಲಪ್ರದವಾಗಬೇಕು. ಅದರ ಮೇಲೆ ಬೆಳಕು ಚೆಲ್ಲಲಿ, ಯಾರ್‍ಯಾರಿದ್ದಾರೆ ಅದರ ಆ ವಿಚಾರದ ಬಗ್ಗೆ ಸರ್ಕಾರ ಪ್ರತಿಸ್ಪಂದನವನ್ನು ನಾವು ಮಾಡಿಯೇ ಮಾಡುತ್ತೇವೆ. ಇಲ್ಲಿ ನಾನು ಎತ್ತಿರತಕ್ಕಂಥದ್ದು ಅನೇಕ ಗಹನವಾದಂಥ ವಿಚಾರಗಳು ಇವೆ. ಫುಡ್ ಪಾಲಿಸಿ ಎನ್ನುವ ವಿಚಾರದ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು. ನಾನು ಬರೀ ನಿಯಮಾವಳಿಗಳ ಕುರಿತು ಮಾತನಾಡುತ್ತೇನೆಂದು ಅಲ್ಲ, ಈ ಎಲ್ಲಾ ಸಮಗ್ರವಾದಂಥ ಹಿನ್ನಲೆಯಲ್ಲಿ ತಮ್ಮ ಮನವೊಲಿಸಲಿ ತಾವು ಇದನ್ನು ಇದೇ ರೂಪದಲ್ಲಾದರೂ ತೆಗೆದುಕೊಳ್ಳಬಹುದು, ಅಥವಾ ತಮ್ಮ ವಿವೇಚನೆಗೆ ಬಿಟ್ಟಂತೆ ನಿಯಮ 69ರ ಕೆಳಗಡೆಯಾದರೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆ ರೀತಿಯಾಗಿ ತಾವು ಯೋಜನೆಯನ್ನು ಮಾಡಿ ತೀರ್ಮಾನವನ್ನು ಕೊಟ್ಟ ನಂತರ ಉಳಿದ ವಿಚಾರದಲ್ಲಿ ನಾವು ಯಾರು ಅಡ್ಡಿಪಡಿಸುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಮಾನ್ಯ ಸಂಸದೀಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಏನು ಹೇಳಿದರೆಂದರೆ, ಅದರ ಬಗ್ಗೆ ನಾನು ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತಿದ್ದೇನೆ. ಡಿಟೇಲ್ಸ್ ಬೇಕಾದರೆ ವಿಷಯ ತಾಸು ಗಟ್ಟಲೆ ಇದೆ. ಕೆಲವೊಂದು ಹೆಸರುಗಳು ಕೂಡ ಇದೆ, ಅದಕ್ಕಾಗಿಯೇ ನಾನು ಕೇವಲ 5 ನಿಮಿಷದಲ್ಲಿಯೇ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು:- ಮೂರಕ್ಕೆ ಹೋಗದೆ, ಆದಷ್ಟು ಬೇಗ ಮುಕ್ತಾಯ ಮಾಡಿದರೆ ಒಳ್ಳೆಯದು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಅದಕ್ಕಾಗಿಯೇ ನಾನು ಸರ್ಕಾರಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದರ ಡಿಟೇಲ್ಸ್‌ಗೆ ಹೋಗುವುದು ಬೇಡ, ಹಿಂದೆ ಇದ್ದಂಥ ಕಾಂಗ್ರೆಸ್ ಸರ್ಕಾರದ ಬಳವಳಿಕೆ ಮುಂದುವರಿದಿದೆ.

ಜನಾದೇಶದ ವಿರುದ್ಧ ಇವತ್ತು ಸರ್ಕಾರವನ್ನು ಮಾಡುತ್ತಿದ್ದಾರೆ, ಮಾಡಲಿ. ಇವತ್ತು ಅದೇ ರೀತಿಯಾಗಿ ಸರ್ಕಾರ ನಡೆಯುತ್ತಿದೆ. ಹಿಂದೆ ಕಾಂಗ್ರೆಸ್ ಸರ್ಕಾರವನ್ನು ತಿರಸ್ಕಾರ ಮಾಡಿದ್ದರು ಅದರ ಬಗ್ಗೆ ಹಿಂದಿನಿಂದಲೂ ಒತ್ತಾಯವನ್ನು ಮಾಡುತ್ತಿದ್ದೆವು ಈಗ ಬಗ್ಗೆ ಸದನ ಸಮಿತಿಯನ್ನು ಮಾಡಿ ಎಂದು ಹೇಳಿದ್ದೆವು. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮಾನ್ಯ ಉಪಮುಖ್ಯ ಮಂತ್ರಿಗಳ ಜೊತೆ ಇವತ್ತು ಕನ್‌ಸಲ್ಟ್ ಮಾಡಬೇಕಾದಂತಹ ಪರಿಸ್ಥಿತಿ ಉಂಟಾಗಿದೆ. ಅವರು ಜಂಟಿ ಸದನ ಸಮಿತಿಗೆ ಒಪ್ಪಿಕೊಂಡು ಬಿಟ್ಟರೆ ಇದರ ಬಗ್ಗೆ ನಾವು ಡಿಟೇಲ್ಸ್‌ನ್ನು ಅವರಿಗೆ ಕೊಡುತ್ತೇವೆ. ಅದರ ಬಗ್ಗೆ ಡಿಟೇಲಾಗಿ ಮಾತನಾಡುತ್ತೇವೆ. ಜಂಟಿ ಸದನ ಸಮಿತಿಯು ಅದರ ಬಗ್ಗೆ ತನಿಖೆಯನ್ನು ಮಾಡಿ ಬಿಡಲಿ. ಅನಂತರ ಇದನ್ನು ಮುಗಿಸಿಬಿಡುವಾ. ಇದು ಬಹಳ ಸರಳವಾಗಿದೆ, ಅವರು ಇದರ ಬಗ್ಗೆ ಬಹಳ ದೊಡ್ಡ ಮನಸ್ಸು ಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತಕ್ಷಣ ಹೇಳಬಹುದಾಗಿತ್ತು. ಈ ರೀತಿಯಾಗಿ ಪಾಯಿಂಟ್ ಆಫ್ ಆರ್ಡರ್‌ಗಳು ಬೇಕಾಗಿಲ್ಲ. ನಾವು ಚರ್ಚೆ ಮಾಡುವುದಕ್ಕೆ ತಂದಿದ್ದೇವೆ, ಎನ್ನುವಂತಹ ಮಾತನ್ನು ಅವರು ಹೇಳಿಬಿಡಬಹುದಾಗಿತ್ತು. ಅದನ್ನು ಸಹ ಅವರು ಹೇಳುವುದಕ್ಕೆ ತಯಾರಾಗಿಲ್ಲ, ಇವತ್ತಿನ ದಿವಸ ಜೆಡಿ (ಎಸ್) ನವರ ಪರಿಸ್ಥಿತಿ ಏನಾಗಿದೆ ಎಂದರೆ, ಇಲ್ಲಿ ಅವರು ಕುಳಿತು ಜಂಟಿ ಸದನ ಸಮಿತಿ ಮಾಡಿಸುವುದಕ್ಕೆ ಒತ್ತಾಯ ಮಾಡಿದ್ದರು. ಆದರೆ ಇವತ್ತು ಅಲ್ಲಿ ಆಡಳಿತ ಪಕ್ಷದ ಕಡೆ ಕುಳಿತು ಒತ್ತಾಯ ಮಾಡಲಾರದ ಪರಿಸ್ಥಿತಿ ಇದೆ. ಹೀಗಾಗಿರುವುದರಿಂದ ನಾನು ಅವರಲ್ಲಿ ಸನ್ಮಾನ್ಯ ಅಧ್ಯಕ್ಷರೆ ವಿನಂತಿಯನ್ನು ಮಾಡುತ್ತಿದ್ದೇನೆ. ಇದರ ಬಗ್ಗೆ ಹೆಚ್ಚಿನ ವಿವರಗಳು ನಮ್ಮ ಕಡೆಯಲ್ಲಿ ಇದೆ, ಸಿಓಡಿಯ ತನಿಖೆಯು ಯಾವ ಕಡೆಗೆ ಹೋಗುತ್ತಿದೆ, ಅದು ದಿಕ್ಕನ್ನು ತಪ್ಪುತ್ತಿದೆ, ಅವರಿಗೆ ಒತ್ತಡಗಳು ಬರುತ್ತಿವೆ. ಅದರ ಬಗ್ಗೆ ನಾವು ಸಾಕಷ್ಟು ಮಾತನಾಡುವವರಿದ್ದೇವೆ, ದಯವಿಟ್ಟು ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಇದರ ಬಗ್ಗೆ ನಾವು ಚರ್ಚೆಗೆ ತಯಾರಿದ್ದೇವೆಂದು ತಾವು ಹೇಳಿ ಬಿಟ್ಟರೆ ಉಳಿದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವಂತಹ ಅವಶ್ಯಕತೆಯಿರುವುದಿಲ್ಲ.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೇ ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ತಾವು ಒಂದು ಕಡೆಯಿಂದ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ನಾವೆಲ್ಲರೂ ಸಿಗ್ನೇಟರಿಗಳು ಇದ್ದೇವೆ.

ಅಧ್ಯಕ್ಷರು:- ವಾಟಾಳ್ ನಾಗರಾಜುರವರನ್ನೂ ಸಹ ಒನ್ ಆಫ್ ದಿ ಸಿಗ್ನೇಟರಿ ಇದ್ದಾರೆ. ಅಯಿತು ತಾವು ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಈ ಎಲ್ಲಾ ಪ್ರಕರಣಗಳ ಹಿನ್ನೆಲೆಯಲ್ಲಿ ಕಪ್ಪು ಪಟ್ಟಿಯ ಬಟ್ಟೆಯನ್ನು ಧರಿಸಿ ಈ

ಸದನಕ್ಕೆ ಬಂದಿದ್ದೇವೆ. ಏಕೆಂದರೆ, ಇಂತಹ ದುರಂತದ ಸನ್ನಿವೇಶವನ್ನು ಸೃಷ್ಟಿ ಮಾಡಿದೆ ಈ ಎರಡು ಪಕ್ಷಗಳು ಒಟ್ಟಿಗೆ ಸೇರಿಕೊಂಡು ಮಾಡಿದೆ. ಆದರ ವಿರುದ್ಧವಾಗಿ ಪ್ರತಿಭಟನಾರ್ಥವಾಗಿ ನಾವಿಲ್ಲಿಗೆ ಬಂದಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಎರಡು ಪಕ್ಷಗಳು ಸೃಷ್ಟಿ ಮಾಡಿದ್ದೇವೆ ಎನ್ನುವ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಸಚಿವರು ನಾನು ಹೇಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಮಾನ್ಯ ಪ್ರಕಾಶ್‌ರವರು ಹಿರಿಯ ಸದಸ್ಯರಾಗಿದ್ದಾರೆ. ನಾನು ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:– ಚರ್ಚೆಗೆ ಸಂಬಂಧಿಸಿದಂತಹ ವಿಚಾರಕ್ಕೆ ಅಧ್ಯಕ್ಷರ ಮನವೊಲಿಸುವುದೇನೆಂದರೆ, ಸಂಘರ್ಷಕ್ಕೆ ದಾರಿ ಮಾಡಿಕೊಡತಕ್ಕಂತಹ ಮಾತುಗಳನ್ನು, ಶಬ್ಧಗಳನ್ನು ಬಳಸದೆಯೇ ದಯಮಾಡಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ನಿಜಸ್ಥಿತಿಯನ್ನು ಹೇಳಿದರೆ,...

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಈ ಅಪವಿತ್ರ ಮೈತ್ರಿ ಏನಿದೆ, ಈ ಪ್ರಕರಣಗಳು ಏನಾಗುತ್ತದೆ. ಈಗಲೂ ಮುಂದುವರಿದಿದೆ. ಇದರ ಬಗ್ಗೆ ರಾಜ್ಯದ ಎಲ್ಲಾ ಜನರಿಗೂ ಗೊತ್ತಾಗಬೇಕು ಎಂದು ಹೇಳಿ ಕಪ್ಪು ಬಟ್ಟೆಯನ್ನು ಕಟ್ಟಿಕೊಂಡು ಬಂದಿದ್ದೇವೆ ಎಂದು ಹೇಳಿದ್ದೇವೆ, ಅದರಲ್ಲಿ ಏನು ಅಪರಾಧವಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಕೈಗಾರಿಕಾ ಸಚಿವರು):– ಮಾನ್ಯ ಅಧ್ಯಕ್ಷರೆ, ನೋಡಿ ತಾವು ಒಂದು ಕೆಲಸವನ್ನು ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮಗೆ ಏತಕ್ಕೆ ನೋವಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಈ ವಿಷಯಕ್ಕೆ ಸಂಬಂಧಪಟ್ಟಂತೆ ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಈ ಮೈತ್ರಿ ಅಪವಿತ್ರ ಅಲ್ಲ. ಇವರು ಮಾಡಿರುವಂತಹ ಪವಿತ್ರವಾದಂತಹ ಮೈತ್ರಿ ಅದರ ಬಗ್ಗೆ ಜನರು ತಿರಸ್ಕಾರ ಮಾಡಿದ್ದಾರೆ. ಇವರು ಏನು ಹೇಳಿದ್ದಾರೆ ಅದೆಲ್ಲವನ್ನು ನೋಡಿಯೇ... ನಿಮಗೆ ಜನರು ಓಟು ಕೊಟ್ಟು ಬಿಟ್ಟಿದ್ದಾರಾ? ಜನರು ನಿಮ್ಮನ್ನು ತಿರಸ್ಕಾರ ಮಾಡಲಿಲ್ಲವಾ?

ಅಧ್ಯಕ್ಷರು:– ಮಾನ್ಯ ಜ್ಞಾನೇಂದ್ರರವರೇ ತಾವು ಮಾತನಾಡಿ, ತಾವುಗಳೆಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈಗ ಚರ್ಚೆಯನ್ನು ಮಾಡೋಣ. ಮಾನ್ಯ ರಾಜ್ಯಪಾಲರ...

ಶ್ರೀ ಎಂ.ಪಿ. ಪ್ರಕಾಶ್:– ನಿಮ್ಮ ಜೊತೆಗೆ ಇದ್ದವರನ್ನು ಕೈಬಿಟ್ಟು ಜೊತೆ ಮೈತ್ರಿ ಮಾಡಿಕೊಂಡಿದ್ದರಲ್ಲಾ ಇದು ಅಪವಿತ್ರ ಮೈತ್ರಿಯಾಗುವುದಿಲ್ಲ?

ಧಾಳಿಯನ್ನು ಮಾಡಿ ಇವತ್ತು ಸಾಕಷ್ಟು ಇದರಲ್ಲಿರುವ ವಿಷಯವನ್ನು ಬಹಿರಂಗಗೊಳಿಸಿದ್ದಾರೆ. ಆಗ ಸರ್ಕಾರ ಅಸ್ತಿತ್ವದಲ್ಲಿ ಬಂದಿರಲಿಲ್ಲ, ಇನ್ನು ಮಂತ್ರಿಮಂಡಲ ರಚನೆಯಾಗಿರಲಿಲ್ಲ, ಅಂತಹ ಸಂದರ್ಭದಲ್ಲಿ ಈ ರೀತಿಯಾದಂಥ ಪ್ರಕರಣವನ್ನು ಸಿಓಡಿಯವರು ಬಹಳ ತನಿಖೆಯನ್ನು ಮಾಡಿ ಆದಷ್ಟು ವಿಷಯಗಳನ್ನು ಹೊರಗೆ ತಂದಿದ್ದಾರೆ. ನಾನು ಇವತ್ತು ಸರ್ಕಾರಕ್ಕೆ ಹೇಳುತ್ತಿದ್ದೇನೆ ಇಲ್ಲಿಯವರೆಗೆ ಸಿಓಡಿಯವರು ಏನೇನು ತನಿಖೆಯನ್ನು ಮಾಡಿದ್ದಾರೆ ಆ ತನಿಖೆಯ ವರದಿಯನ್ನು ತಕ್ಷಣ ಬಹಿರಂಗಪಡಿಸಬೇಕು. ಏಕೆಂದರೆ ಇವತ್ತು ಸರ್ಕಾರ ಅಸ್ತಿತ್ವಕ್ಕೆ ಬಂದಿದೆ, ಇವತ್ತು ಹಲವಾರು ರಾಜಕಾರಣಿಗಳು, ಹಲವಾರು ಮುಖ್ಯವಾದಂಥ ಅಧಿಕಾರಿಗಳು ಇವತ್ತಿನ ದೊಡ್ಡದೊಡ್ಡ ತಿಮಿಂಗಲಗಳು ಇದರಲ್ಲಿ ಸಿಕ್ಕಿಹಾಕಿಕೊಮಡಿದ್ದಾರಲ್ಲಾ, ಅವರೆಲ್ಲರೂ ಸರ್ಕಾರದ ಮೇಲೆ ಪ್ರಭಾವವನ್ನು ಬೀರಲಿಕ್ಕೆ ಪ್ರಾರಂಭ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳ ಮತ್ತು ಉಪ ಮುಖ್ಯಮಂತ್ರಿಗಳ ಕಡೆ ಬರುತ್ತಾರೆ. ತಮ್ಮ ಪ್ರಭಾವವನ್ನು ಬೀರಲಿಕ್ಕೆ ಪ್ರಾರಂಭ ಮಾಡುತ್ತಾರೆ. ಹೀಗಾಗಿ ಆ ಸಿಓಡಿಯ ತನಿಖೆಯ ದಿಕ್ಕು ಬೇರೆ ಕಡೆಗೆ ಹೋಗುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ಈ ಒಂದು ಸದನದಲ್ಲಿ ಎಷ್ಟೋ ಸಲ ನಾವು ಒತ್ತಾಯವನ್ನು ಮಾಡಿದ್ದೇವೆ. ಸಿಬಿಐ ತನಿಖೆ ಮಾಡಿ, ಜಂಟಿ ಸದನ ಸಮಿತಿ ಮಾಡಿ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್ ಕೈಗಾರಿಕೆ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ವಿರೋಧ ಪಕ್ಷದ ನಾಯಕರಾಗಿ ಕೆಲಸವನ್ನು ಮಾಡಿದವರು. ಮಾನ್ಯ ರಮೇಶ್‌ಕುಮಾರ್‌ರವರು ಎತ್ತಿರತಕ್ಕಂಥ ಪಾಯಿಂಟ್ ಆಫ್ ಆರ್ಡ್ ಅನ್ನು ತಾವು ಎತ್ತಿ ಹಿಡಿದಿದ್ದೀರಿ. ಪ್ರಿಲಿಮಿನರಿ ಸಬ್‌ಮಿಷನ್ ಮೂಲಕ ತಮ್ಮ ಮನವನ್ನು ಒಲಿಸಲಿಕ್ಕೆ ಏನು ಬೇಕು ಎನ್ನುವಂಥದ್ದನ್ನು ಹಿರಿಯ ಸದಸ್ಯರಾದಂಥ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಈಗ ಇವರು ಏನು ಹೇಳುತ್ತಿದ್ದಾರೆಂದರೆ, ಈಗ ಸಿಓಡಿ ಎನ್‌ಕ್ವಾಯರಿ ಮಾಡಿದ್ದು ತಪ್ಪಾ ಹಾಗಾದರೆ? ಮುಖ್ಯಮಂತ್ರಿಗಳು ಆದ ಮೇಲೆ, ಅಥವಾ ನಮ್ಮ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಸಿಓಡಿ ತನಿಖೆ ದಿಕ್ಕು ತಪ್ಪಿಸುವುದಕ್ಕೆ ಏನಾದರೂ ಪುರಾವೆ ಇದ್ದರೆ ನೀವು ಈ ಹೌಸ್ ಮುಂದೆ ಇಡಿ. ಅದು ಇಲ್ಲ. ಸುಮ್ಮನೆ ಪ್ರಚಾರಕ್ಕೋಸ್ಕರವಾಗಿ ದಿಕ್ಕುತಪ್ಪಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆಂದು ಹೇಳತಕ್ಕಮಥದ್ದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:– ಇದು ಪ್ರಚಾರಕ್ಕೆ ಅಲ್ಲ, ಮಾನ್ಯ ಸಿಂಧ್ಯಾರವರು ಯಾವುದನ್ನೂ ಪ್ರಚಾರಕ್ಕೆ ಮಾಡುವುದಿಲ್ಲ ಪಾಪ. ಪ್ರಚಾರದ ಬಗ್ಗೆ ಪಾಪ ಅವರಿಗೆ ಏನೂ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಒಬ್ಬೊಬ್ಬರು ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಯಾವಾಗಲೂ ಪ್ರಚಾರಕ್ಕೋಸ್ಕರವಾಗಿ ಕೆಲಸ ಮಾಡಿದವರು ಅಲ್ಲ. ಈ ಕಡೆ ಕುಳಿತುಕೊಂಡಿದ್ದಾಗ ಅವರು ಏನು ಮಾಡುತ್ತಿದ್ದರೆಂದು ಅವರನ್ನು ಕೇಳಬೇಕು.

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗಗಾಜ್‌ರವರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಿದ್ದಾರೆ. ಅವರು ಯಿಲ್ಡ್ ಆಗಿರುವುದಿಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಸಿಂಧ್ಯಾರವರೆ, ನಮ್ಮದೇನೂ ಬದಲಾವಣೆಯಾಗಿಲ್ಲ, ನಿಮ್ಮದು ಬದಲಾವಣೆಯಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನೀವು ಏನು ಮಾಡುತ್ತಿದ್ದೀರಾ ಅದೇ ಮಾಡುತ್ತಾ ಇದ್ದೆ ನಾನು ಅಲ್ಲಿ ಕುಳಿತಾಗ.

ಶ್ರೀ ವಾಟಾಳ್ ನಾಗರಾಜ್:– ತಾವು ಏನು ಮಾಡಿದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಈಗ ನೀವು ಏನು ಮಾಡುತ್ತಿದ್ದೀರಾ ಅದನ್ನೇ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಆದನ್ನೇ ನೀವು ಈಗ ಅಲ್ಲಿ ಮಾಡಿ. ನೀವು ಇಲ್ಲಿ ಏನು ಮಾಡಿದ್ದೀರಿ ಅದನ್ನು ಅಲ್ಲಿ ಏಕೆ ಮಾಡುತ್ತಿಲ್ಲ?

ಅಧ್ಯಕ್ಷರು:– ಈಗ ಏನು ಚರ್ಚೆ ಇದೆ, ದಯಮಾಡಿ ಅದನ್ನು ಮುಂದುವರೆಸಿ. ಅಚಾತುರ್ಯವಾಗಿ ಮಾತನಾಡುವುದರಿಂದ ಸಭೆಯ ಘನತೆ ಹೆಚ್ಚಾಗುವುದಿಲ್ಲ, ಈ ಚರ್ಚೆಗೆ ಅರ್ಥ ಪೂರ್ಣವಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ (ಕೃಷಿ ಮತ್ತು ತೋಟಗಾರಿಕೆ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ನಾಯಕರು ಒಂದು ನಿಮಿಷ ನಿಂತರೆ ಹೇಳುತ್ತೇನೆ, 20 ತಂಡಗಳಲ್ಲಿ ಸಿಒಡಿಯವರು ಹೋಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆಂದು ನಿಮ್ಮ ನಾಯಕರೇ ಹೇಳಿದರೆ, ವಿರೋಧ ಪಕ್ಷದ ಉಪ ನಾಯಕರು ಸಿಒಡಿಯವರು ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಯಾವುದನ್ನು ನಂಬುವುದು ಹೇಳಿ. ಈಗ ತಾನೇ ನಾಯಕರು ಹೇಳಿದರು. ಸಿಒಡಿಯವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಎಂದು.

ಅಧ್ಯಕ್ಷರು:– ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಾನು ಎದ್ದು ನಿಂತಿದ್ದೇನೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿರುವುದರಿಂದ ಅವರು ಮಾತನಾಡಲಿಕ್ಕೆ ಶುರು ಮಾಡಿದ್ದಾರೆ, ಉಳಿದಂಥ ನಮ್ಮ ಸ್ನೇಹಿತರು ಮಾತನಾಡಬೇಕು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಹತ್ತಿರದಿಂದ ನಾಲ್ಕೂವರೆ ವರ್ಷದಿಂದ ಈ ಘಟನಾವಳಿಗಳನ್ನು ನೋಡಿಕೊಂಡು ಬಂದಿದ್ದಾರೆ ಅವರಿಗೆ ಮನವರಿಕೆಯಾಗಿದೆ, ಇದು ತನಿಖೆಯಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಅವರು ಮೌನವಾಗಿ ಕುಳಿತಿದ್ದಾರೆ, ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿದಂಥ ನಮ್ಮ ಹಿರಿಯ ಸಚಿವರಾಗಿದ್ದಂಥ ಮಾನ್ಯ ಪ್ರಕಾಶ್‌ರವರು ಹಾಗೂ ಮಾನ್ಯ ಸಿಂಧ್ಯಾರವರು ಇಷ್ಟು ದೊಡ್ಡ ಪ್ರಮಾಣದಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ ಏಕೆ ಎನ್ನುವುದು ಇದರ ಬಗ್ಗೆ ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಕೈಗಾರಿಕೆ ಸಚಿವರು):– ಮಾನ್ಯ ಅಧ್ಯಕ್ಷರೆ, ತನಿಖೆಯಾಗಲಿ ಎಂದು ನಾನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹೇಳುತ್ತಿದ್ದೇನೆ. ನಾನು ಹೇಳುವುದನ್ನೆ ತಾವು ಕೇಳುತ್ತಿಲ್ಲ.

(ಗೊಂದಲ)

ಶ್ರೀ ಎನ್.ಎಸ್. ಭೋಸರಾಜು:– ಮಾನ್ಯ ಅಧ್ಯಕ್ಷರೆ, ನಾವು ಯಾರೂ ಮೌನವಾಗಿ ಕುಳಿತಿಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಮೌನವಾಗಿ ಕುಳಿತಿದ್ದೇವೆಂದು ಹೇಳುತ್ತಿದ್ದಾರೆ, ನೀವು ಏನು ಹೇಳುತ್ತಿದ್ದಿರೆಂದು ನಾವು ಕೇಳುತ್ತಿದ್ದೇವೆ ಅಷ್ಟೆ.

ಅಧ್ಯಕ್ಷರು:– ಮಾನ್ಯ ಸದಸ್ಯರುಗಳು ಈ ರೀತಿಯಾಗಿ ಅಡ್ಡಡ್ಡವಾಗಿ ಮಾತನಾಡಿದರೆ ಹೇಗೆ?

+ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ಹೇಳಬೇಕು. ನನಗೆ ತಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು:– ವ್ಯವಸ್ಥೆಯ ಬಗ್ಗೆ ಮಾತನಾಡುವುದಕ್ಕೆ ಹೋದರೆ ಅದು ತುಂಬಾ ಕೆಟ್ಟಿದೆ ಅದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಆದರೆ ಎಲ್ಲರೂ ಸೇರಿ ಇದನ್ನು ಸರಿಪಡಿಸುವಂತಹ ಅಗತ್ಯವಿದೆ, ಅದಕ್ಕೋಸ್ಕರವಾಗಿ ತಾವುಗಳೆಲ್ಲರೂ ರಚನಾತ್ಮಕವಾಗಿ ಮಾತನಾಡಬೇಕು, ಸಂಘರ್ಷಕ್ಕೆ ದಾರಿ ಮಾಡಿಕೊಡದೆ ಮಾತನಾಡಬೇಕು. ವ್ಯವಸ್ಥೆಯನ್ನು ಸರಿಪಡಿಸುವ ಬಗ್ಗೆ ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ವಾದದಲ್ಲಿ ಮಂಡನೆಯನ್ನು ಮಾಡಬೇಕು.

(ಗೊಂದಲ)

ಶ್ರೀ ಆರ್. ಅಶೋಕ:– ಮಾನ್ಯ ಅಧ್ಯಕ್ಷರೆ, ಅವರು ಏತಕ್ಕಾಗಿ ಮಾತನಾಡಬೇಕು? ಅವರಿಗೆ ತಾವು ಅವಕಾಶವನ್ನು ಕೊಟ್ಟಿದ್ದೀರಾ? ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದರೆ ಹೇಳಿ.

(ಗೊಂದಲ)

1.40 ಪಿಎಂ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಇದು ಯಾವ ಶಬ್ಧ? ಅವರೇಕೆ ಮಾತನಾಡಬೇಕು ಎಂದರೆ ಏನು ಅರ್ಥ ಇದು? ಹೇಳುವುದಕ್ಕೆ ಸ್ವಲ್ಪವಾದರೂ ಬೇಕಲ್ಲವೇ? ಅವರೇಕೆ ಮಾತನಾಡಬೇಕು ಎಂದರೆ ಏನಿದು? ಏನು ಹೇಳಬೇಕೋ ಪ್ರಾಮಾಣಿಕವಾಗಿ ಹೇಳಿ. ಅದನ್ನು ಬಿಟ್ಟು ಅವರೇಕೆ ಮಾತನಾಡಬೇಕು, ಇವರೇಕೆ ಮಾತನಾಡಬೇಕು ಎಂದರೆ ಏನಿದು? ಇದು ಯಾವ ಪದ್ಧತಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಇವರು ಮೂವರೂ ಮಂತ್ರಿಗಳಾಗಿದ್ದವರು. ಮಾತನಾಡಬೇಕಾದರೆ ಮಧ್ಯೆ ಬರುತ್ತಾರೆ.

ಅಧ್ಯಕ್ಷರು:– ಈ ವಿಷಯಕ್ಕೆ ಬನ್ನಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ನಾನು ನಿಂತಿದ್ದೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ಏನಿದು? ಬಹಳ ಉತ್ತಮವಾಗಿ ನಡೆಯುತ್ತದೆ ಎಂದು ಕೊಂಡಿದ್ದೆ. ಯಾಕೋ ಹಳೆಯ ದಾರಿಯಲ್ಲೇ ಹೋಗುತ್ತಿದೆ. ದಯಮಾಡಿ ಅರಗಜ್ಞಾನೇಂದ್ರ ರವರೆ ಮಾತನಾಡಿ, ದಯಮಾಡಿ ಸಹಕರಿಸಬೇಕು ತಾವುಗಳು.

ಶ್ರೀ ಅರಗಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮನವೊಲಿಸುವುದಕ್ಕೋಸ್ಕರ ಈ ವಿಚಾರಗಳನ್ನು ಹೇಳುತ್ತಿದ್ದೇನೆ. ವಿವರಕ್ಕೆ ಹೋದಾಗ ಯಾರು ಜೆಸಿಬಿ ಬಳಸಿದ್ದಾರೆ, ಜೆಸಿಬಿಯನ್ನು ಯಾರಾದರೂ ಬಳಸಿದ್ದರೆ ಹಿಡಿಯುವಂಥ ಕರ್ತವ್ಯವನ್ನು ಅವರು ಮಾಡಬೇಕಾಗಿತ್ತು. ಯಾವ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತು ಅವರು ಮಾಡಬೇಕಾಗಿತ್ತು. ಇಲ್ಲಿ ಇದ್ದುಕೊಂಡು ಅವರು ಬಳಸಿದ್ದಾರೆ, ಇವರು ಬಳಸಿದ್ದಾರೆ ಎಂದು ವಾದ ಮಾಡುವುದಲ್ಲ, ಹಿಡಿಯಬೇಕಾಗಿತ್ತು.

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ:– ಅವರೂ ಅದನ್ನು ಮಾಡಿದ್ದಾರೆ. ನೀವೆಲ್ಲಾ ಇದನ್ನು ಹೇಳಬೇಡಿ. ನಾವೇ ಅದಕ್ಕೆ ಸಮ್ಮತಿಯನ್ನು ಕೊಟ್ಟಿದ್ದೇವೆ. ಅದರ ಬಗ್ಗೆ

ವಿಧಾನಸಭೆಯಲ್ಲೆ ಕುಳಿತು ಚರ್ಚೆ ಮಾಡಿದ್ದಾರೆ. ಆದರೆ ತಾವು ಹೀಗೆ ಹೇಳುತ್ತೀರಲ್ಲಾ? ನಾವೆಲ್ಲಾ ಅದಕ್ಕೆ ಅಧ್ಯಕ್ಷರು, ತಮಗೆ ಅದು ಗೊತ್ತಾಗಲಿಲ್ಲವೇನು?

(ಗೊಂದಲ)

ಅದನ್ನು ಸರ್ಕಾರದವರು ಹಿಡಿಯಬೇಕು ಎಂಬುದು ಅಲ್ಲ, ಅದಕ್ಕೆ ಜವಾಬ್ದಾರರಾಗಿರತಕ್ಕ ಶಾಸಕರು ತಾವು ಅದರ ಅಧ್ಯಕ್ಷರು...

(ಗೊಂದಲ)

ಶ್ರೀ ಆರ್. ಆಶೋಕ:– ಅವರು ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಎಲ್ಲರೂ ಕುಳಿತುಕೊಂಡು ಸಹಕರಿಸಬೇಕು.

ಶ್ರೀ ಆರ್. ಆಶೋಕ್:– ಅವರಿಗೆ ಚರ್ಚೆ ನಡೆಯಬಾರದು. ಅಧಿಕಾರಿಗಳನ್ನು ರಕ್ಷಣೆ ಮಾಡಬೇಕು. ಚರ್ಚೆಯನ್ನು ಹೀಗೆಯೇ ಮುಂದೂಡಬೇಕು ಎನ್ನತಕ್ಕದ್ದು ಅವರ ಉದ್ದೇಶ.

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಪರಸ್ಪರ ಚುಚ್ಚಿ ಮಾತನಾಡತಕ್ಕ ಅಗತ್ಯವಿಲ್ಲ. ಈಗ ಈ ನಿಲುವಳಿ ಸೂಚನೆಯ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ನ್ನು ಮಾಡುತ್ತಿದ್ದೇವೆ. ಆ ಕಾರಣದಿಂದ ನನಗೆ ಮನವರಿಗೆ ಮಾಡಿಕೊಡಿ. ಅದಕ್ಕೆ ಏನೇನೋ ಹೇಳತಕ್ಕಂಥ ಅಗತ್ಯತೆ ಇಲ್ಲ, ದಯಮಾಡಿ ಹೇಳಿ.

ಶ್ರೀ ಆರಗಜ್ಞಾನೇಂದ್ರ:– ಇದ್ದಿದ್ದನ್ನು ಇದ್ದಂತೆ ಹೇಳಿದರೆ ಎದ್ದು ಬಂದು ಒದ್ದಂತೆ ಆಗುತ್ತದೆಂದು ಅವರು ತಿಳಿದುಕೊಂಡರೆ ನಾನೇನು ಮಾಡಲಿ? ವಾಸ್ತವಿಕ ಸಂಗತಿಯನ್ನು ನಿಮಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ನೀವು ನನ್ನ ರಕ್ಷಣೆಗೆ ಬರಬೇಕು. ಅವರು ಮೂರು ನಾಲ್ಕು ಎದ್ದು ನಿಂತು ನನ್ನ ಚರ್ಚೆ ಮಾಡುವುದನ್ನು ತಡೆಯುವುದಾದರೆ, ಅವರು ಗಂಟಲನ್ನು ದೊಡ್ಡದು ಮಾಡುವುದಾದರೆ ನಾವು ಹೆದರಿ ಓಡಿ ಹೋಗಲು ತಯಾರಿಲ್ಲ. ಇಲ್ಲಿ ನಾವು ಹೇಳಬೇಕಾಗಿರುವುದನ್ನು ಹೇಳಲು ಬಂದಿದ್ದೇವೆ. ತಾವೂ ಅವಕಾಶ ಕೊಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಸರ್ಕಾರದ ಕಡೆಯಿಂದ ಯಾರಿಗಾದರೂ ಅನುಮತಿ ಕೊಟ್ಟು ಪ್ರತಿಪಕ್ಷದವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ರೀತಿ ಮಧ್ಯೆ ಮಧ್ಯೆ ನಿಂತು ಅಡ್ಡಿ ಮಾಡುವಂಥ ಪ್ರಯತ್ನ ಮಾಡುವುದಾದರೆ ನಾವು ಅದೇ ಭಾಷೆಯಲ್ಲಿ ಉತ್ತರವನ್ನು ಕೊಡಬೇಕಾಗುತ್ತದೆ. ನೀವು ಅವಕಾಶವನ್ನು ಕೊಟ್ಟವರು ಮಾತನಾಡಲಿ. ಅಲ್ಲಿ ಏನಾದರೂ ಕೊರತೆಗಳಿದ್ದರೆ ನೀವು ಹೇಳುವುದಿದ್ದರೆ ನೀವು ಮಾರ್ಗದರ್ಶನ ಮಾಡಿ. ಪ್ರತಿ ಹೆಜ್ಜೆಹೆಜ್ಜೆಗೆ ಎದ್ದು ನಿಂತುಕೊಳ್ಳುವುದನ್ನು ದಯಮಾಡಿ ಸರಿಯಲ್ಲ. ಪಾಯಿಂಟ್ ಆಫ್ ಆರ್ಡರ್ ಇದ್ದರೆ ಹೇಳಿ ನಾವು ಈಲ್ಡ್ ಆಗಲು ಸಿದ್ಧರಿದ್ದೇವೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ:– ಹೇಳತಕ್ಕ ವಿಚಾರವನ್ನು ಹೇಳಿದರೆ ತೊಂದರೆ ಇಲ್ಲ. ಆದರೆ ಅದನ್ನು ಬಿಟ್ಟು ಬೇರೆ ಹೇಳುತ್ತೀರಲ್ಲಾ. ಅನ್‌ಪಾರ್ಲಿಮೆಂಟರಿ ವರ್ಡ್ಸ್‌ನ ಬಗ್ಗೆ ಮಾನ್ಯ ಅಧ್ಯಕ್ಷರು ತೀರ್ಮಾನ ಕೊಡಲಿ. ಎದ್ದು ಬಂದು ಒದೆಯುವುದು ಎಂಬ ಬಗ್ಗೆ ಅವರೇನು ಹೇಳಿದ್ದಾರೆ ಅದರ ಬಗ್ಗೆ ತೀರ್ಮಾನ ಕೊಡಲಿ.

ಮಾಡುವಾಗ ತಾವು ಒಂದು ಮಾರ್ಗದರ್ಶನವನ್ನು ಮಾಡಿದ್ದೀರಿ. ಇದನ್ನು ನನಗೆ ಮನಮೊಲಿಸಿ ನಿಯಮಾವಳಿಗಳ ಕೆಳಗಡೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದರ ಬಗ್ಗೆ ಮನವರಿಕೆ ಮಾಡಿಕೊಡಿ ಎಂದು ಹೇಳಿದ್ದೀರಿ. ಅದರ ಬಗ್ಗೆ ನಮ್ಮ ಎಲ್ಲಾ ಸದಸ್ಯರುಗಳೂ ಕೂಡ ನಾವು ಸಹಿ ಮಾಡಿದವರು ನಾವು ಮಾತನಾಡುತ್ತೇವೆಂದು ಹೇಳಿದ್ದಾರೆ ಅವರು ತಮ್ಮ ಮನವೊಲಿಸುವುದಕ್ಕೆ ತಮ್ಮ ವಿಚಾರಗಳ ಹಿನ್ನಲೆಯಲ್ಲಿ ಮಾತನಾಡಿದರು. ಆದರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುವಂಥ ಈ ಸಂದರ್ಭದಲ್ಲಿ ಆ ಇಡೀ ಚರ್ಚೆಯ ವಿಚಾರವನ್ನು ಬೇರೆ ಕಡೆಗೆ ತಿರುಗಿಸುತ್ತಿದ್ದಾರೆ. ಅದರ ಮೆರಿಟ್ ಆಫ್ ದಿ ಕೇಸ್‌ನ್ನು ತಾವು ಮಾತನಾಡುತ್ತಿದ್ದೀರಿ. ತಾವು ಹೇಳಿದ್ದನ್ನು ಮಾಡುವುದು ಅದು ಮುಂದಿನ ಹಂತದಲ್ಲಿ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರುಗಳು ಅನುಭವಿಗಳಿದ್ದಾರೆ ಒಂದು ವಿಷಯವನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಹಾಸನ-ಮೇ-26, ಅದರ ವಿವರಕ್ಕೆ ನಾನು ಹೋಗುವುದಿಲ್ಲ. "ಬರಪರಿಹಾರ ಯೋಜನೆಯಡಿ ಜಿಲ್ಲೆಗೆ ಬಿಡುಗಡೆಯಾದ ಆಹಾರಧಾನ್ಯದಲ್ಲಿ ಶೇಕಡಾ 70ರಷ್ಟು ದುರುಪಯೋಗವಾಗಿದೆ ಎಂದು ಜಾತ್ಯಾತೀತ ಜನತಾದಳ ಮುಖಂಡ ಹೊಳೆನರಸೀಪುರದ ಶಾಸಕ ಹೆಚ್.ಡಿ. ರೇವಣ್ಣರವರು ಆರೋಪಿಸಿದರು. ಅಧಿಕಾರಿಗಳೇ ಆ ಆಹಾರಧಾನ್ಯ ದುರುಪಯೋಗಕ್ಕೆ ಹೊಣೆಗಾರರು, ಜಿಲ್ಲಾಧಿಕಾರಿಯವರು ಈ ವೇಳೆಗಾಗಲಿ ದಾಖಲಾತಿಗಳನ್ನು ವಶಪಡಿಸಿಕೊಳ್ಳಬೇಕಾಗಿತ್ತು ಆದರೆ ಇದುವರೆಗೆ ಅದರ ಬಗ್ಗೆ ಕ್ರಮವನ್ನು ಕೈಗೊಂಡಿರುವುದಿಲ್ಲ. ಈಗಲಾದರೂ ದಾಖಲಾತಿಗಳನ್ನು ವಶಪಡಿಸಿಕೊಂಡು ಸಮಗ್ರ ತನಿಖೆಯನ್ನು ನಡೆಸಬೇಕೆಂದು ಯಾರು ಹೇಳಿದ್ದಾರೆ, ಒಬ್ಬ ಜವಾಬ್ದಾರಿಯುತ ಸಚಿವರು. ಇದರ ಅರ್ಥ ನಮ್ಮೆಲ್ಲರಿಗೂ ಸತ್ಯ ಏನು ಎನ್ನುವುದು ಗೊತ್ತಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ, ಈ ರೀತಿ ಜಿಲ್ಲಾಧಿಕಾರಿಗಳು ಆಫೀಸರ್ಸ್‌ಗಳು, ಪೊಲೀಸ್ ಅಧಿಕಾರಿಗಳು ಶಾಮೀಲಾಗಿರುವಂಥ ಇಂತಹ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾದದ್ದು ಒಂದು ಕಡೆ, ಸಿಓಡಿಯ ಪ್ರಗತಿ ಏನಾಗಿದೆ ಎನ್ನುವುದನ್ನು ತಿಳಿಸುವುದು ಮತ್ತೊಂದು ಕಡೆ, ನಮ್ಮಲ್ಲಿರುವಂಥ ವಿವರಗಳನ್ನು ಕೊಡುತ್ತೇವೆ ಅದರ ಉಪಯೋಗವನ್ನು ಮಾಡಿಕೊಂಡು ಇನ್ನು ಮುಂದೆ ಇಂತಹ ಲೂಟಿಯಾಗದಂತೆ ನೋಡಿಕೊಳ್ಳಬೇಕು ಎಂದಾಗ ಮಾನ್ಯ ಮುಖ್ಯಮಂತ್ರಿಗಳು ಎದ್ದುನಿಂತುಕೊಂಡು, ಮಾನ್ಯ ಅಧ್ಯಕ್ಷರೆ ನೀವು ಬೇಕಾದಷ್ಟು ಸಮಯವನ್ನು ಕೊಡಿ, ಸರ್ಕಾರದ ಗಮನಕ್ಕೆ ತರಲಿ ನಾನು ತನಿಖೆ ಮಾಡಿಸುತ್ತೇನೆ ಬೇಕಾದ ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತೇನೆಂದು ಹೇಳುವುದನ್ನು ಬಿಟ್ಟು ಪಾಯಿಂಟ್ ಆಫ್ ಆರ್ಡರ್, ಅಂದರೆ, ಹಾಗಾದರೆ ಇದರ ಬಗ್ಗೆ ನಾನು ನಿಮ್ಮನ್ನು ಕೇಳುತ್ತೇನೆ. ಏನು ವಿವರಗಳನ್ನು ಕೊಡದೆ, ಅಧ್ಯಕ್ಷರಿಗೆ ಮನಮೊಲಿಸುವುದು ಹೇಗೆ ಎನ್ನುವುದರ ಬಗ್ಗೆ ತಾವು ಹೇಳಿ ಕೊಟ್ಟರೆ ನಾವು ಅದೇ ರೀತಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರಿಗೆ ಯಾವ ರೀತಿಯಾಗಿ ಈ ಸದನದಲ್ಲಿ ಮಾತನಾಡಬೇಕೆಂದು ಹೇಳುವಂಥ ದಾಶ್ಯತೆಯನ್ನು ನಾನು ತೋರಿಸುವುದಿಲ್ಲ. ಆದರೆ ನಾವು ನಿಯಮಾವಳಿಗಳ ಪ್ರಕಾರ ಈ ಸದನದ ಕಲಾಪಗಳನ್ನು ನಡೆಸಿಕೊಂಡು

ಹೋಗಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ. ಆ ಜವಾಬ್ದಾರಿಗಳಿಗೆ ಅನುಗುಣವಾಗಿ ತಾವು ಮಾರ್ಗದರ್ಶನವನ್ನು ಮಾಡಿದ್ದೀರಿ. ಈಗ ಇರತಕ್ಕಂಥದ್ದು ಈ ನಿಲುವಳಿ ಸೂಚನೆಯ ಪ್ರಶ್ನೆ. ಇದು ಅತ್ಯಂತ ಜರೂರಾಗಿ ಇರಬೇಕು ಎನ್ನುವ ಕಾರಣಕ್ಕಾಗಿಯೇ ತಾವು ಚರ್ಚೆಗೆ ತೆಗೆದುಕೊಳ್ಳಬೇಕು, ಚರ್ಚೆಗೆ ಯಾವ ವಿಷಯ ಗ್ರಾಸ ಆಗಬೇಕೆನ್ನುವುದು ಬೇರೆ, ಚರ್ಚೆಗೆ ಈ ನಿಯಮಾವಳಿಗಳ ಪ್ರಕಾರ ಎಲ್ಲಾ ಅರ್ಹತೆಯನ್ನು ಪಡೆದಿದೆ ಆ ಕಾರಣಕ್ಕಾಗಿ ಇದನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳತಕ್ಕಂಥ ವಿಚಾರ ಬೇರೆ, ಅದನ್ನು ನಾವು ಗಮನಕ್ಕೆ ತಂದಿದ್ದೇವೆ ವಿನಹಃ ಯಾವುದನ್ನು ಮಾತನಾಡಬೇಕು, ಯಾವುದನ್ನು ಮಾತನಾಡಬಾರದು ಎನ್ನತಕ್ಕಂಥ ವಿಷಯ ಅಲ್ಲ, ತಾವೆಲ್ಲಾ ಸದಸ್ಯರು ಇದಕ್ಕೆ ಯಾರ್‍ಯಾರು ಸಹಿ ಮಾಡಿದ್ದಾರೆ ಅವರ ಎಲ್ಲಾ ಅಭಿಪ್ರಾಯಗಳನ್ನು ಆ ಇಡೀ ವಿಚಾರಗಳ ಬಗ್ಗೆ ವಿವರಗಳ ಬಗ್ಗೆ ಹೋಗಲಾರದಂಥ ರೀತಿಯಲ್ಲಿ ಈ ನಿಲುವಳಿ ಸೂಚನೆ ಇತ್ತೀಚೆಗಷ್ಟೆ ನಡೆದಿರುವಂಥ ವಿಷಯಗಳಿಗೆ ಅಷ್ಟೆ ಸೀಮಿತವಾಗಿರಬೇಕು, ನಿಲುವಳಿ ಸೂಚನೆಗೆ ಹಕ್ಕುಭಾದ್ಯತೆಯನ್ನು ಪ್ರಶ್ನಿಸಿರುವಂಥೆ ಇರಕೂಡದು. ಅದೇ ಅಧಿವೇಶನದಲ್ಲಿ ಚರ್ಚೆಯಾಗಲಾರದಂತೆ ಇರಬೇಕು, ಇವೆಲ್ಲಾ ನಿಯಮಾವಳಿಗಳ ಪ್ರಕಾರ ಇದೆ ಅದೆಲ್ಲಾ ಅವರಿಗೆ ಗೊತ್ತಿರುವಂಥದ್ದು. ಈ ವಿಚಾರದ ಪ್ರಕಾರ ತಾವು ಪ್ರಸ್ತಾಪವನ್ನು ಮಾಡಿ ಅಧ್ಯಕ್ಷರ ಮನವೊಲಿಸಿ ಅದಕ್ಕೆ ಅವಕಾಶವನ್ನು ಅವರು ಕೊಟ್ಟರೆ ನಾವು ಚರ್ಚೆಗೆ ಹಿಂಜರಿಯುವುದಿಲ್ಲ. ಈ ಉತ್ತರವನ್ನೂ ಕೂಡ ಮಾನ್ಯ ವಾಟಾಳ್ ನಾಗರಾಜ್‌ರವರು ತಮಾಷೆಯಾಗಿ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನೇ ಕೊಟ್ಟು ಬಿಟ್ಟಿದ್ದಾರಲ್ಲಾ ಎಂದು, ಈ ಚರ್ಚೆಯನ್ನು ನಿಲ್ಲಿಸುವಂಥ ಉದ್ದೇಶ ಈ ಸರ್ಕಾರಕ್ಕೆ ಇಲ್ಲ. ತಪ್ಪಿತಸ್ಥರನ್ನು ರಕ್ಷಿಸುವಂಥ ಉದ್ದೇಶವು ಇಲ್ಲ, ಅದಕ್ಕಿಂತಲೂ ಮುಂದೆ ಹೋಗಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎನ್ನುವಂಥದ್ದೆ ಈ ಸರ್ಕಾರದ ಉದ್ದೇಶವಾಗಿರುವುದರಿಂದ ಚರ್ಚೆ ಫಲಪ್ರದವಾಗಬೇಕು. ಅದರ ಮೇಲೆ ಬೆಳಕು ಚೆಲ್ಲಲಿ, ಯಾರ್‍ಯಾರಿದ್ದಾರೆ ಅದರ ಆ ವಿಚಾರದ ಬಗ್ಗೆ ಸರ್ಕಾರ ಪ್ರತಿಸ್ಪಂದನವನ್ನು ನಾವು ಮಾಡಿಯೇ ಮಾಡುತ್ತೇವೆ. ಇಲ್ಲಿ ನಾನು ಎತ್ತಿರತಕ್ಕಂಥದ್ದು ಅನೇಕ ಗಹನವಾದಂಥ ವಿಚಾರಗಳು ಇವೆ. ಫುಡ್ ಪಾಲಿಸಿ ಎನ್ನುವ ವಿಚಾರದ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು. ನಾನು ಬರೀ ನಿಯಮಾವಳಿಗಳ ಕುರಿತು ಮಾತನಾಡುತ್ತೇನೆಂದು ಅಲ್ಲ, ಈ ಎಲ್ಲಾ ಸಮಗ್ರವಾದಂಥ ಹಿನ್ನಲೆಯಲ್ಲಿ ತಮ್ಮ ಮನವೊಲಿಸಲಿ ತಾವು ಇದನ್ನು ಇದೇ ರೂಪದಲ್ಲಾದರೂ ತೆಗೆದುಕೊಳ್ಳಬಹುದು, ಅಥವಾ ತಮ್ಮ ವಿವೇಚನೆಗೆ ಬಿಟ್ಟಂತೆ ನಿಯಮ 69ರ ಕೆಳಗಡೆಯಾದರೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆ ರೀತಿಯಾಗಿ ತಾವು ಯೋಜನೆಯನ್ನು ಮಾಡಿ ತೀರ್ಮಾನವನ್ನು ಕೊಟ್ಟ ನಂತರ ಉಳಿದ ವಿಚಾರದಲ್ಲಿ ನಾವು ಯಾರು ಅಡ್ಡಿಪಡಿಸುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಮಾನ್ಯ ಸಂಸದೀಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಏನು ಹೇಳಿದರೆಂದರೆ, ಅದರ ಬಗ್ಗೆ ನಾನು ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತಿದ್ದೇನೆ. ಡಿಟೇಲ್ಸ್ ಬೇಕಾದರೆ ವಿಷಯ ತಾಸು ಗಟ್ಟಲೆ ಇದೆ. ಕೆಲವೊಂದು ಹೆಸರುಗಳು ಕೂಡ ಇದೆ, ಅದಕ್ಕಾಗಿಯೇ ನಾನು ಕೇವಲ 5 ನಿಮಿಷದಲ್ಲಿಯೇ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು:- ಮೂರಕ್ಕೆ ಹೋಗದೆ, ಆದಷ್ಟು ಬೇಗ ಮುಕ್ತಾಯ ಮಾಡಿದರೆ ಒಳ್ಳೆಯದು.

ಒಪ್ಪಿಕೊಳ್ಳುತ್ತೇನೆ ನಿಮಗ್ಯಾರಿಗೂ ಲೆಕ್ಕ ಗೊತ್ತಿಲ್ಲ. ಯಾರು ಅದರ ಬಗ್ಗೆ ಲೆಕ್ಕವನ್ನು ಕೊಡಬೇಕೋ ಅವರು ಇಲ್ಲಿ ಇಲ್ಲ. ಆದ್ದರಿಂದ ಅವರು ಹೇಳುವುದು ಸರಿ ಇದೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮರಪಲ್ಲಿ:- ಹಾಗಾದರೆ ಇವರು ಏನು ಹೇಳಿದರು? ಇದಕ್ಕೇನು ಅರ್ಥ?

(ಗೊಂದಲ)

ಅಧ್ಯಕ್ಷರು:- ದಯಮಾಡಿ ಯಾರೂ ಯಾರನ್ನೂ ಸಹ, ದಯಮಾಡಿ ಕುಳಿತುಕೊಳ್ಳಿ, ಈ ರೀತಿಯಾದರೆ ಹೇಗೆ? ಮಾನ್ಯ ಆರಗಜ್ಞಾನೇಂದ್ರರವರು ದಯಮಾಡಿ ಬೇಗೆ ಮುಗಿಸಿ, ಇನ್ನೂ ಮಾತನಾಡಲು ಬಹಳ ಜನ ಸದಸ್ಯರುಗಳು ಇದ್ದಾರೆ.

ಶ್ರೀ ಆರಗಜ್ಞಾನೇಂದ್ರ:- ಈ ಅಕ್ಕಿಯನ್ನು ಮಾರಾಟ ಮಾಡಿದಂಥ, ರವಾನೆ ಮಾಡಿದಂಥದ್ದರಿಂದ ಬಂದಂಥ ಹಣದಿಂದ ಇವತ್ತು ಇಷ್ಟು ಜನವಾದರೂ ಇಲ್ಲಿಗೆ ಬಂದಿದ್ದಾರೆ. ಇಲ್ಲದಿದ್ದರೆ ಇದು ನಿರ್ಣಾಮವಾಗುತ್ತಿತ್ತು. ಆ ಪರಿಸ್ಥಿತಿಯಲ್ಲಿ ರಾಜ್ಯವನ್ನು ಆಳಿದ್ದಾರೆ. ಇದು ಇವತ್ತು ಸಾರೋದ್ದಾರವಾಗಿ ನಡೆದಿದೆ. ಇದರ ಬಗ್ಗೆ ವಿವರವನ್ನು ಕೊಡಲು ತಾವು ನಮಗೆ ಅವಕಾಶವನ್ನು ಕೊಡಬೇಕು.

ನಮ್ಮ ಹತ್ತಿರ ಸಾಕಷ್ಟು ದಾಖಲಾತಿಗಳು ಇವೆ. ಅವುಗಳನ್ನು ತಮ್ಮ ಎದುರುಗಡೆ ಇಡುತ್ತೇವೆ. ನಾವು ಸುಮ್ಮಸುಮ್ಮನೆ ಹೇಳುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್...

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ವಿವರಗಳನ್ನು ನಿಮ್ಮೆದುರುಗಡೆ ಹೇಳುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕು...

ಅಧ್ಯಕ್ಷರು:- ಅವಕಾಶ ಇದೆ. ನೀವೇನು ಪ್ರಿಲಿಮಿನರಿ ಸಬ್‌ಮಿಶನ್ ಮಾಡುತ್ತಿದ್ದೀರೋ, ಏನು ಮಾಡುತ್ತಿದ್ದೀರಿ?

ಶ್ರೀ ಆರಗ ಜ್ಞಾನೇಂದ್ರ:- ನಾನು ಮುಗಿಸುತ್ತೇನೆ. ವಿವರಗಳನ್ನು ಇಡಲಿಕ್ಕೆ ನಮಗೆ ತಾವು ಅವಕಾಶ ಮಾಡಿಕೊಡಬೇಕು. ಜನರ, ರಾಜ್ಯದ ಹಿತದೃಷ್ಟಿಯಿಂದ ಸಾಕಷ್ಟು ದಾಖಲಾತಿಗಳನ್ನು ನಾವು ಹೊರಹಾಕುವವರಿದ್ದೇವೆ. ಇದು ಯಾರ್‍ಯಾರ ಮೈಮೇಲೆ ಬರುತ್ತದೆಯೋ, ಯಾರ್‍ಯಾರು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆ ಎನ್ನುವಂಥಾದ್ದನ್ನು ನಾವು ಸಾಬೀತು ಮಾಡುತ್ತೇವೆ. ದಯಮಾಡಿ ನಮಗೆ ವಿವರಗಳನ್ನು ಒದಗಿಸಲಿಕ್ಕೆ ಮತ್ತು ವಿವರವಾದಂಥ ಚರ್ಚೆಗೆ ನಿಯಮಾವಳಿ 60ರ ಪ್ರಕಾರ ಅವಕಾಶ ಮಾಡಿಕೊಡಬೇಕೆಂದು ಹೇಳಿ ವಿನಂತಿಯನ್ನು ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:- ಈಗ ಏನು ಚರ್ಚೆ ಇದೆ ಅದನ್ನು ಮುಂದೆ ಎತ್ತಿಕೊಳ್ಳೋಣ. ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.